ಈ ರಾಜ್ಯದಲ್ಲಿ ಎಲ್ಲರೂ ಮುಂದುವರಿದವರು ಇಲ್ಲ. ಎಲ್ಲ ಜನಾಂಗದಲ್ಲೂ ಕಡು ಬಡವರಿದ್ದಾರೆ. ಕೆಲವು ಜನಾಂಗದವರಿಗೆ ಶೇ. ೫೦ನ್ನು ರಿಸರ್ವೇಷನ್ ಮಾಡಿದ್ದೇವೆಂದು ಹೇಳಿದರು. ಆದರೆ ಶೇ. ೬೦ ರಷ್ಟು ಜನರು ಬ್ಯಾಕ್‌ವರ್ಡ್‌ಕ್ಲಾಸ್ ಎಂದು ನೀವೇ ಡಿಕ್ಲೇರ್ ಮಾಡಿದ್ದೀರಿ.

ಶ್ರೀ ಡಿ. ದೇವರಾಜ ಅರಸ್.—ನಾನು ಮಾಡಿರುವುದು ವಾಸ್ತವವಾಗಿದೆ ಅಷ್ಟೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳು ಬ್ಯಾಕ್‌ವರ್ಡ್‌ಕ್ಲಾಸ್ ಬಗ್ಗೆ ಹೇಳುವಾಗ ಅದನ್ನು ಬಹಳ ಸಹಾನುಭೂತಿಯಿಂದ ವಿಚಾರ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದರ ಬಗ್ಗೆ ನಾನು ಹೇಳುತ್ತಿಲ್ಲ. ಆದರೆ ಆ ರೀತಿ ವಿಚಾರ ಮಾಡುತ್ತೇವೆಂದು ಹೇಳಿ ಬಹಳ ವರ್ಷ ಗಳಾಗಿವೆ. ಆದ್ದರಿಂದ ಅದನ್ನು ಈಗ ತೆಗೆದುಕೊಂಡರೆ ಒಳ್ಳೆಯದು. ಆದ್ದರಿಂದ ಈ ಬಗ್ಗೆ ಕೂಡಲೇ ನಿರ್ಣಯ ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ಹಾವನೂರು ಕಮಿಷನ್ ಬಗ್ಗೆ ಚರ್ಚೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕೆಂದು ಮಾನ್ಯ ಅಧ್ಯಕ್ಷರವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಮುಖ್ಯಮಂತ್ರಿಗಳು ಬಹಳ ಬುದ್ಧಿವಂತಿಕೆಯಿಂದ ಮಾತ ನಾಡಿದರು. ನಾವು ಹೇಳಿದರ ಬಗ್ಗೆ ಅವರು ಈ ಮನೆಗೆ ಭರವಸೆ ನೀಡಲಿಲ್ಲ. ಸಂಖ್ಯೆ ಹೆಚ್ಚು ಆಗ ಬಾರದು. ಹಾವನೂರು ಕಮಿಷನ್ ವರದಿಯನ್ನು ಜಾತೀಯ ಆಧಾರವಾಗಿಟ್ಟುಕೊಂಡು ಮಾಡು ವುದು ಬೇಡ. ಎಲ್ಲಾ ಜನಾಂಗದಲ್ಲೂ ಗರೀಬರಿದ್ದಾರೆ. ಆರ್ಥಿಕ ದೃಷ್ಟಿಯಿಂದ ತೆಗೆದುಕೊಂಡು ಬ್ಯಾಕ್‌ವರ್ಡ್‌ಕ್ಲಾಸ್ ಎಂದು ತೀರ್ಮಾನ ತೆಗೆದುಕೊಳ್ಳಬೇಕು. ಅದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿ ಗಳು ಭರವಸೆ ನೀಡಬೇಕು.

SUPPLIMENTARY DEMANDS FOR GRANTS FOR THE YEAR, 1977-78

General Discussion

Sri S. M. YAHYA (Minister for Finance).—Sir, on the recommendation of the Governor, I beg to move:

> "That a further sum not exceeding Rs. 1,10,000 be granted to Government to defray the charges which will come in course of payment during the year ending the 31st day of March, 1978, in respect of Demand No. 4 "Taxes on Income Professions Sales and other Services'."

(2) That a further sum not exceeding Rs. 1,000 be granted to Government to defray the charges which will come in course of payment during the year ending the 31st day of March 1978, in respect of Demand No. 5 'Land Revenue etc'.

(3) That a further sum not exceeding Rs. 15,00,000 be granted to Government to defray the charges which will come in course of payment during the year ending the 31st day of March 1978, in respect of Demand No. 6 'Stamps and Registration'.

(4) That further sum not exceeding Rs 50,00,000 be granted to Government to defray the charges which will come in course of payment during the year ending the 31st day of March. 1978, in respect of Demand No. 9 'Miscellaneous General Services',

(5) That a further sum not exceeding Rs. 1,000 be granted to Government to defray the charges which will come in course of payment during the year ending the 31st day of March, 1978 in respect of Demand No. 10 'Secretariat'.

(6) That further sum not exceeding Rs. 1,000 be granted to Government to defray the charges which will come in course of payment during the year ending the 31st day of March, 1978, in respect of Demand No. 13 'Police and Fire Services'.

(7) That a further sum not exceeding Rs. 1,000 be granted to Government to defray the charges which will come in course of payment during the year ending the 31st day of March, 1978, in respect of Demand No. 15 'Stationery and Printing and Development of Kannada'.

(8) That a further sum not exceeding Rs. 1,000 be ganted to Government to defray the charges which will come in course of payment. during the year ending the 31st day of March 1978 in respect of Demand No. 16 'Public Works' (excluding construction).

(9) That a further sum not exceeding Rs. 55,48,000 be granted to Government to defray the charges which will come in course of payment during the year ending the 31st day of March, 1978, in respect of Demand No. 17 'Buildings'.

(10) That a further sum not exceeding Rs. 3,000 be granted to Government to defray the charges will come in course of payment during the year ending the 31st day of March, 1978, in respect of Demand No. 18 "Bangalore Development Authority and other Services"

(11) That a further sum not exceeding Rs. 50,00,000 be granted to Government to defray the charges which will come in course of payment during the year ending the 31st day of March, 1978, in respect of Demand No. 19 "Pension and other Retirement Benefits".

(12) That a further sum not exceeding Rs. 2,93,42,000 be granted to Government to defray the charges which will come in course of payment during the year ending the 31st day of March, 1978, in respect of Demand No. 20 'Higher Education and Wakfs'.

(13) That a further sum not exceeding Rs. 1,000 be granted to Government to defray the charges which will come in course of payment during the year ending 31st March1978 in respect of Demand No. 21 'Youth Services, Art and Culture'.

(14) That a further sum not exceeding Rs. 4,000 be granted to Government to defray the charges which will come in course of payment during the year ending the 31st day of March, 1978, in respect of Demand No. 22 "Primary and Secondary Education".

(15) That a further sum not exceeding Rs. 2,000 be granted to Government to defray the charges which will come in course of payment during the year ending the 31st day of March 1978 in respect of Demand No. 23 "Medical Services and Family Planning".

(16) That a further sum not exceeding Rs. 2,000 be granted to Government to defray the charges which will come in course of payment during the year ending the 21st day of March, 1978, in respect of Demand No. 25 "Public Health Engineering".

(17) That a further sum not exceeding Rs. 2,05,02,000 be granted to defray the charges which will come in course of payment during the year ending the 31st day of March, 1978, in respect of Demand No. 26 "Housing" (excluding Residential Buildings).

(18) That a further sum not exceeding Rs. 19,42,000 be granted to Government to Defray the charges which will come in course of payment during the year ending the 31st day of March, 1978, in respect of Demand No. 27 "Urban Development etc."

(19) That a further sum not exceeding Rs. 30,62,000 be granted to Government to defray the charges which will come in course of payment during the year ending the 31st day of March, 1978, in respect of Demand No. 28 " Information and Publicity".

(20) That a further sum not exceeding Rs. 2,28,50,000 be granted to defray the charges which will come in course of payment during the year ending 31st day of March 1978 in respect of Demand No. 30 "Social Security and Welfare" (excluding Women and Children Welfare).

(21) That a further sum dot exceeding Rs. 1,000 be granted to Government to defray the charges which will come in course of payment during the year ending the 31st day of March, 1978, in respect of Demand No. 31 "Women and Children Welfare"

(22) That a further sum not exceeding Rs. 1,50,00,000 be granted to Government to defray the charges which will come in course of payment during the year ending the 31st day of March 1978 in respect of Demand No, 34 "Insurance and Pensions under Social Security Scheme".

(23) That a further sum not exceeding Rs. 3,000 be granted to Government to defray the charges which will come in course of payment during the year ending the 31st day of March, 1978 in respect of Demand no 35 "Relief on Account of Natural Calamities"

(24) That a further sum not exceeding Rs. 16,45,000 be granted to Government to defray the charges which will come in course of payment during the year ending the 31st day of March, 1978 in respect of Demand no 36 "Religions and Charitable Institutions, etc"

(25) That a further sum of not exceeding Rs 3,56,83,000 be granted to Government to defray the charges which will come in course of payment during the year ending the 31st day of March 1978 in respect of Demand No. 37 "Co-operation (excluding Regulated Market)"

(26) That a further sum not exceeding Rs. 1,000 be granted to Government to defray the charges which will come in course of payment during the year ending the 31st day of March 1978 in respect Demand No. 38 "Regulated Market".

(27) That a further sum not exceeding Rs. 1,000 be granted to Government to defray the charges which will come in course of payment during the year ending the 31st day of March, 1978, in respect of Demand No. 39 Agriculture (excluding Horticulture and DPAP).

(28) That a further sum not exceeding Rs. 9,00,000 be granted to Government to defray the charges which will come in course of payment during the year ending the 31st day of March, 1978, in respect of Demand No. 40 "Horticulture".

(29) That a further sum not exceeding Rs. 2,97,01,000 be granted to Government to defray the charges which will come in course of payment during the year ending the 31st day of March 1978 in respect of Demand No. 41 "Minor Irrigation".

(30) That a further sum not exceeding Rs. 8,53,34,000 be granted to Government to defray the charges which will come in course of payment during the year ending the 31st day of March, 1978, in respect of Demand No. 42 "Soil and Water Conservation".

(31) That a further sum not exceeding Rs. 2000 be granted to Government to defray the charges which will come in course of payment during the year ending the 31st day of March, 1978 in respect of Demand No. 44 "Food and Civil Supplies".

(32) That a further sum not exceeding Rs. 1,89,50,000 be granted to Government to defray the charges which will come in course of payment during the year ending the 31st day of March, 1978, in respect of Demand No. 45 "Animal Husbandry and Dairy Development".

(33) That a further sum not exceeding Rs. 2,000 be granted to Government to defray the charges which will come in course of payment during the year ending the 31st day of March 1978 in respect of Demand No. 46 "Fisheries"

(34) That a further sum not exceeding Rs. 1,000 be granted to Government to defray the charges which will come in course of payment during the year ending the 31st day of March 1978 in respect of Demand No. 47 "Forest".

(35) That a further sum not exceeding Rs. 3,34,31,000 be granted to Government to defray the charges which will come in course of payment during the year ending the 31st day of March 1978 in respect of Demand No. 48 "Community Development".

(36) That a further sum not exceeding Rs. 6,04,97,000 be granted to Government to defray the charges which will come in course payment during the year ending the 31st day of March 1978 in respect of Demand No. 50 "Industries, Mines and Geology (excluding Small Scale Industries and Sericulture)".

(37) That a further sum not exceeding Rs. 1,39,16,000 be granted to Government to defray the charges which will come in course of payment during the year ending the 31st March 1978 in respect of Demand No. 51 "Small Scale Industries".

(38) That a further sum not exceeding Rs. 69,00,000 be granted to Government to defray the charges which will come in course of payment during the year ending the 31st day of March 1978 in respect of Demand No. 52 "Sericulture".

(39) That a further sum not exceeding Rs. 10,83,14,000 be granted to Government to defray the charges which will come in course of payment during the year ending the 31st day of March 1978 in respect of Demand No. 53 "Irrigation, Navigation, Drainage and Flood Control Projects."

(40) That a further sum not exceeding Rs. 7,27,14,000 be granted to Government to defray the charges which will come in course of payment during the year ending the 31st day of March 1978 in respect of Demand No. 54 "Power Projects."

(41) That a further sum not exceeding Rs. 66,73,000 be granted to Government to defray the charges which will come in course of payment during the year ending the 31st day of March 1978 in respect of Demand No. 55 "Ports and Water Transport Services."

(42) That a further sum not exceeding Rs. 8,000 be granted to Government to defray the charges which will come in course of payment during the year ending the 31st day of March 1978 in respect of Demand No. 56 "Roads and Bridges."

(43) That a further sum not exceeding Rs. 28,69,000 be granted to Government to defray the charges which will come in course of payment during the year ending 31st day of March 1978 in respect of Demand No. 57 "Road Transport and Tourism."

(44) That a further sum not exceeding Rs. 1,000 be granted to Government to defray the charges which will come in Course of Payment during the year ending the 31st March 1978 in respect of Demand No. 59 "Loans to Government Servants and Miscellaneous Loans."

The question was proposed

MR. SPEAKER.—The demands are before the House for Discussion

Taking up notice under Rule 59

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ನಿಲುವಳಿ ಸೂಚನೆ ಮಂಡಿಸಲು ರೂಲ್ ೫೯ರ ಕೆಳಗೆ ನೋಟೀಸ್ ಕೊಟ್ಟಿದ್ದೆ. It is about murder in Devanahalli ಅದನ್ನು ಇವತ್ತು ತೆಗೆದುಕೊಳ್ಳುತ್ತೀರೋ ಅಥವಾ ನಾಳೆ ತೆಗೆದುಕೊಳ್ಳುತ್ತೀರೋ ? ಆದರ ಬಗ್ಗೆ ಏನಾಯಿತು ?

ಅಧ್ಯಕ್ಷರು.—ಅದನ್ನು ವಿಚಾರ ಮಾಡಿಸುತ್ತೇನೆ.

SRI H.D. DEVE GOWDA.—The very purpose of giving the notice of adjournment motion is defeated, if it is not going to be taken up to-day.

ಅಧ್ಯಕ್ಷರು.—ಅದು ಇನ್ನೂ ಪರಿಶೀಲನೆ ಆಗುತ್ತಿದೆ. ಅದರ ಬಗ್ಗೆ ಇನ್ನೂ ಮಾಹಿತಿಯನ್ನು ತಿಳಿದುಕೊಳ್ಳಬೇಕಾಗಿದೆ. ಅದನ್ನು ತಿಳಿದು ಮುತ್ತೆ ಹೇಳುತ್ತೇನೆ. I will examine all the aspects of this motion and let the hon'ble Members know.

SRI S.R. BOMMAI.—It is not a question of examination by the Hon'ble Speaker. I have given a notice of adjournment motion. I will make an attempt to convince the Chair about its admissibility and I am entitled to make a brief statement so far as the purpose of the adjournment motion is concerned. Thereupon it is for the chair to give permission or not.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳಿದ್ದಾಗ ಈ ವಿಷಯ ಹೇಳಿದ್ದರೆ ಒಳ್ಳೆಯದಾಗಿತ್ತು. ಬೇಕಾದರೆ ನಾಳೆ ತೆಗೆದುಕೊಳ್ಳೋಣ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮುಂತ್ರಿಗಳಿದ್ದಾಗ ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳಬೇಕು ಅಂತ ಇಲ್ಲ. ಅಡ್ಜರ್ನ್‌ಮೆಂಟ್ ಮೋಷನ್ ಇದ್ದಾಗ ಮಂತ್ರಿಗಳಿರಬೇಕು.

ಅಧ್ಯಕ್ಷರು.—ಸರ್ಕಾರಕ್ಕೆ ತಿಳಿಸುತ್ತೇನೆ. ನಾಳೆ ಅವರು ಇದಕ್ಕೆ ಉತ್ತರ ಕೊಡುವಹಾಗೆ ಮಾಡುತ್ತೇನೆ.

2-30 P.M.

SRI H. D. DEVE GOWDA.—Mr. Speaker Sir, before my friend Mr. S.R. Bommai, Leader of the Opposition advances his argument to convince the chair for the admissibility of the adjournment motion, you can send words to the Chief Minister to come to the House. Or on behalf of the Chief Minister someboby can represent.

ಶ್ರೀ ಬಿ. ಭಾಸ್ಕರಶೆಟ್ಟಿ.—ವಿಧಾನ ಪರಿಷತ್ತಿನಲ್ಲಿ ಅವರಿಗೆ ಬೇರೆ ಕೆಲಸವಿರುವುದರಿಂದ ಅಲ್ಲಿಗೆ ಹೋಗಿದ್ದಾರೆ.

SRI H.D. DEVE GOWDA.—My friend Mr. Bhaskar Shetty being a member for the last 20 years knows the importance of this subject.

ಶ್ರೀ ಬಿ. ಭಾಸ್ಕರಶೆಟ್ಟಿ.—ವಿಧಾನಪರಿಷತ್ತಿನಲ್ಲಿ ಅಷ್ಟೇ ಮುಖ್ಯವಾದ ಇಷ್ಯೂ ಇರುವುದರಿಂದ ಅವರು ಅಲ್ಲಿ ಇರಬೇಕಾಗುತ್ತದೆ.

SRI H.D. DEVE GOWDA.—Anybody on behalf of Government can represent.

ಶ್ರೀ ಎಸ್.ಆರ್. ಬೊಮ್ಮಾಯಿ.—ದಯವಿಟ್ಟು ಈ ಮನೆಯು ಒಂದು ನಿಯಮಾವಳಿಯ ಪ್ರಕಾರ ನಾವು ನಡೆದುಕೊಳ್ಳೋಣ. ನಿಯಮಾವಳಿ ಪ್ರಕಾರ ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಾಗ ಅದನ್ನು ಮುಂದಿನ ದಿನಕ್ಕೆ ಹಾಕುವುದಕ್ಕಾಗುವುದಿಲ್ಲ. ಆದ್ದರಿಂದ ಇವತ್ತೇ ತೆಗೆದುಕೊಳ್ಳಬೇಕಾಗುತ್ತದೆ. ನಿಯಮಾವಳಿ ಪ್ರಕಾರ ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದೇವೆ. ಸಂಬಂಧಪಟ್ಟ ಮಂತ್ರಿಗಳು ಈ ಸಭೆಯಲ್ಲಿ ಇರುವುದಕ್ಕೆ ಆಗದೇ ಇದ್ದರೆ ಬೇರೆ ಮಂತ್ರಿಗಳಿಗೆ ಈ ಬಗ್ಗೆ ಮಾಹಿತಿ ಕೊಟ್ಟು ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಸಭೆಯ ಕಾರ್ಯಕಲಾಪಗಳನ್ನು ಸುಸೂತ್ರವಾಗಿ ನಡೆಸಲಿಕ್ಕೆ ಅವಕಾಶ ಮಾಡಿಕೊಡಬೇಕು. ಸಂಬಂಧಪಟ್ಟ ಮಂತ್ರಿಗಳೇ ಇರಬೇಕು ಎಂದು ನಾವು ಹೇಳುವುದಿಲ್ಲ. ಅವರಿದ್ದರೆ ಒಳ್ಳೆಯದು. ಒಂದು ವೇಳೆ ಅವರು ಮೇಲ್ಮನೆಯಲ್ಲಿ ಬೇರೆ ಕಾರ್ಯದಲ್ಲಿ ತೊಡಗಿದ್ದರೆ ಬೇರೆ ಮಂತ್ರಿಗಳಿಗೆ ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ನಾನು ಏನು ಹೇಳಿಕೆ ಕೊಡುತ್ತೇನೆ, ಆ ಬಗ್ಗೆ ನನ್ನ ಅಭಿಪ್ರಾಯವನ್ನು ಮಂತ್ರಿಗಳು ಕೇಳಿಕೊಳ್ಳಲಿ. ನಂತರ ಯಾರಾದರೂ ಮಂತ್ರಿಗಳು ಉತ್ತರ ಕೊಡಲಿ. ನಾವು ಇಂಥ ಮಂತ್ರಿಗಳೇ ಉತ್ತರ ಕೊಡಬೇಕು ಎಂದು ಹೇಳುವುದಿಲ್ಲ. ಯಾರು ಉತ್ತರ ಕೊಟ್ಟರೂ ತೊಂದರೆ ಇಲ್ಲ. ಇದರ ಬಗ್ಗೆ ಮಾಹಿತಿ ತರಿಸಿಕೊಳ್ಳಲಿ. ಇದು ಒಂದು ದಿವಸ ತಡವಾದರೆ ಸರಿಹೋಗುವುದಿಲ್ಲ. ಮರ್ಡರ್ ಆಗಿ ಹೋಗಿದೆ. ಸಾಕ್ಷಿ, ಪುರಾವೆ ಕೂಡ evidence will be destroyed.

SRI S.M. YAHYA.—I will send words.

ಶ್ರೀ ಭಾಸ್ಕರಶೆಟ್ಟಿ.—ಅಡ್ಜರ್ನ್‌ಮೆಂಟ್ ಮೋಷನ್ ಮಂಡನೆ ಮಾಡುವುದಕ್ಕಿಂತ ಮುಂಚಿತವಾಗಿ ಸಂಬಂಧಪಟ್ಟ ಮಂತ್ರಿಗಳು...

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನಿನ್ನೂ ಮಂಡನೆ ಮಾಡುತ್ತಿಲ್ಲ.

ಶ್ರೀ ಬಿ ಭಾಸ್ಕರಶೆಟ್ಟಿ.—ನಾನು ಹೇಳುವುದೇನೆಂದರೆ ಆ ಬಗ್ಗೆ ಛಾರ್ಜ್‌ಷೀಟ್ ಹಾಕಿ ಕೋರ್ಟಿಗೆ ಹೋಗಿದ್ದರೆ ಸಬ್‌ಜ್ಯುಡೀಸ್ ಆಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಚಾರ್ಜ್‌ಷೀಟ್ ಹಾಕಿದ್ದಾರೆ ಎಂದು ಹೇಳಿದರೆ ನಾವು ಮಾತನಾಡುವುದೇ ಇಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಒಂದು ದಿವಸ ಕಾಲಾವಕಾಶ ಕೊಟ್ಟು ನಾಳೆ ಈ ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಂಡರೆ ವಿಷಯ ಕೋರ್ಟಿಗೆ ಹೋಗಿದೆಯೋ ಇಲ್ಲವೇ ಎಂಬುದನ್ನು ಎಗ್ಸಾಮಿನ್ ಮಾಡಿ ಹೇಳುವುದಕ್ಕಾಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅದಕ್ಕೋಸ್ಕರವೇ ನಿಯಮಾವಳಿಯಲ್ಲಿ ಎರಡು ಗಂಟೆ ಮುಂಚಿತವಾಗಿ ಕೊಡಬೇಕು ಎಂದಿರುವುದು. ನಾನು ಎರಡು ಗಂಟೆ ಮೊದಲೇ ಕೊಟ್ಟಿದ್ದೇನೆ. ಸರ್ಕಾರ ಆ ವಿಷಯದ ಬಗ್ಗೆ ಚಾರ್ಜ್‌ಷೀಟ್ ಹಾಕಿದ್ದರೆ ಹೇಳಲಿ ನಾನು ಮಾತನಾಡುವುದಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸಂಬಂಧಪಟ್ಟ ಮಂತ್ರಿಗಳು ಇಲ್ಲದೇ ಇರುವುದರಿಂದ...

ಶ್ರೀ ಎಸ್.ಆರ್. ಬೊಮ್ಮಾಯಿ.—ಮಂತ್ರಿಗಳು ಬರಬೇಕು.

SRI S.M. YAHYA.—I will send words.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು, ಬೇರೆ ವಿಷಯವನ್ನು ಚರ್ಚೆಗೆ ತೆಗೆದುಕೊಂಡಮೇಲೆ ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳುವುದಕ್ಕಾಗುತ್ತದೆಯೇ ?

ಶ್ರೀ ಎಸ್.ಎಂ. ಯಾಹ್ಯಾ.—ಈ ದಿನ ತೆಗೆದುಕೊಳ್ಳಬೇಕು. ಅದಕ್ಕಾಗಿ ಅವರನ್ನು ಕರೆಸುವುದಕ್ಕೆ ಹೇಳಿಕಳುಹಿಸಿದ್ದೇನೆ.

SRI S.R. BOMMAI.—Sir, before we go to the other subject this adjournment motion will have to be taken up. Otherwise the very purpose of the motion will be defeated.

ಅಧ್ಯಕ್ಷರು.—ಬೊಮ್ಮಾಯಿಯವರೇ, ಈಗ ಸಂಬಂಧಪಟ್ಟ ಮಂತ್ರಿವರ್ಯರು ಇರುತ್ತಾರೆ ಸರಿ ಆದರೆ ಇದನ್ನು ನಾಳೆ ತೆಗೆದುಕೊಳ್ಳಬಾರದು ಎಂದು ಯಾವ ನಿಯಮದಲ್ಲಿದೆ ? ಅದು ಎಲ್ಲಿದೆ ?

ಶ್ರೀ ಎಸ್.ಆರ್. ಬೊಮ್ಮಾಯಿ.—ರೂಲ್ ೫೦ ಮತ್ತು ೫೧ನ್ನು ನಾನು ಇಲ್ಲಿ ಓದುತ್ತೇನೆ. Rule 50 reads thus.

"50. Subject to the provisions of these Rules, a motion for an adjournment of the business of the Assembly for the purposes of discussing a definite matter of urgent public importance may be made with the consent of the Speaker.

51. Notice of an adjournment motion shall be given to the Secretary two hours before the commencement of the sitting on the day on which motion is proposed to be made".

ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ವಾಮಿ, ರೂಲ್ ೫೦ರಲ್ಲಿ ಹೇಳಿರುವಂತೆ ಇದಕ್ಕೆ ಅಧ್ಯಕ್ಷರ ಅನುಮತಿ ಬೇಕಾಗುತ್ತದೆ. ಅದರಲ್ಲಿ "may be made with the consent of the Speaker" ಎಂದು ಇದೆ.

Sri B.B. SAYANAK:—Point of Order, Sir, three persons are standing simultaneously and are speaking on the subject.....

ಶ್ರೀ ಬಿ. ಭಾಸ್ಕರ ಶೆಟ್ಟಿ:—ನಿಮ್ಮಲ್ಲೂ ಕೂಡ ಒಟ್ಟಿಗೆ ೫-೬ ಜನ ಎದ್ದು ನಿಂತು ಮಾತನಾಡುತ್ತಿದ್ದೀರಿ.

Sri M.C. NANAIAH:—Mr. Speaker, Sir, so far as Rule 50 is concerned, the rule contemplates giving up notice of 2 hours prior to the commencement of the session. But, such notice has been given now to move the motion in the House and the consent of the Speaker is necessary. Now, the Speaker has pointed it that this subject of this motion which has been made by the Leader of the Opposition will be taken up for tomorrow. This is definitely the inherent discretionary power of the Speaker. But the Leader of the Opposition has moved this motion and said that this is to be taken up today. If the Speaker feels and by exercising his descretion power gives decision that the matters may be taken up tomorrow the Leader of the Opposition cannot question it. Rule 50 is not a mandatory provision entitling the member to move the motion. It is the discretionary power of the Chair to permit for discussion on the motion. I think the heaven will not fall of if we going to take up the subject tomorrow. The Hon'ble Speaker has already said that we take up this subject for discussion tomorrow.

ಶ್ರೀ ಎಸ್.ಆರ್. ಬೊಮ್ಮಾಯಿ:—ಮಾನ್ಯ ಮಿತ್ರರ ಹೆಸರು ನನಗೆ ಪರಿಚಯವಿಲ್ಲ. ಆದರೆ ಚೆನ್ನಾಗಿ ವಾದ ಮಾಡಿದ್ದಾರೆ ಅವರು ಸರಿಯಾಗಿ ವಿಷಯ ಅರ್ಥಮಾಡಿಕೊಂಡಿಲ್ಲ. Rule 50 will came into operation only, if the Speaker gives consent for adjournment motion and the motion will be discussed. The consent of the Speaker is necessary to take up the important motion and the conventions both in parliament and in this House is to convince the Speaker to get the consent. And as the Leader of the Opposition or the mover of the motion can propogate certain ideas and advance some argument for the admission of such a important motion. This is what I am trying to do. Now, rule 51 says that 'notice of adjournment motion shall be given to the Secretary two hours before the commencement of the sitting on the day on which motion is proposed to be made'. It is very clear. Rule 51 is mandatory and is very clear. We have given notice two hours before the commencement of the sitting of the day on which the motion is to be taken up. I have moved it today and if the matters is not taken up it lapses. Therefore, let us have certain very good conventions which have been followed in this House. Normally, the adjournment motion is to come over for which consent was given by the Speaker on the very day.

MR. SPEAKER:—According to rule 51, if the hon'ble Member gives notice two hours earlier it is all right. This notice is given on 25th and today is 28th.

Sri S.R. BOMMAI:—Today only I have given notice.

MR. SPEAKER:—The hon ble Member has given two hours noti e today. But what prevents the Speaker from taking it up tomorrow? I have permitted the Hon'ble Finance Minister to move the motion and he has already moved it, and we have gone to the next subject. I do not want to come in the way of the hon'ble Member; I will permit him and he can move it tomorrow. He can make a brief statement and if he substantiates his motion, I will dispose it of according to rules. I think we can take it up tomorrow. Let us now go to the next item. The Finance Minister has already moved the motion.

ಶ್ರೀ ಹೆಚ್.ಡಿ. ದೇವೇಗೌಡ (ಹೊಳೇನರಸೀಪುರ ಕ್ಷೇತ್ರ):— ಮಾನ್ಯ ಅಧ್ಯಕ್ಷರೇ, ತಾವು ಏನು ಆದೇಶ ಕೊಡುತ್ತೀರಿ ಅದನ್ನು ನಾನು ಪ್ರಶ್ನಿಸುವುದಕ್ಕೆ ಹೋಗುವುದಿಲ್ಲ: ಆದರೆ ಒಂದು ಲೋಪವಾಗಿದೆ. ಅದೇನೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ಪ್ರಸ್ತಾಪ ಮಾಡಿದರು ಅದನ್ನು ಸರ್ಕಾರೀ ಕಾರ್ಯಕಲಾಪವನ್ನು ಪ್ರಾರಂಭಿಸುವುದಕ್ಕೆ ಮುಂಚೆ ತಾವು ಸಂಬಂಧಪಟ್ಟ ಮಂತ್ರಿಗಳನ್ನು ಕರೆಯುವುದಕ್ಕೆ ಮುಂಚೆ ಮಾಡಬೇಕಿತ್ತು. ಈಗ ತಮಗೆ ಕಾರ್ಯಾಲಯದವರು ಏನು ಸಲಹೆ ಕೊಡುತ್ತಿದ್ದಾರೆ ಅದನ್ನು ತಾವು ಕ್ಲಾರಿಫೈ ಮಾಡಬೇಕಾಗುತ್ತದೆ. ಅಡ್ಜರ್ನ್‌ಮೆಂಟ್ ಮೋಷನ್ನಿಗೆ ಎರಡು ಗಂಟೆ ಮುಂಚೆ ನೋಟೀಸ್ ಕೊಡಬೇಕೆಂಬ ಉದ್ದೇಶ ವೇನೆಂದರೆ ಸರ್ಕಾರದ ವತಿಯಿಂದ ಸಂಬಂಧಪಟ್ಟ ಮಾಹಿತಿಯನ್ನು ಪಡೆಯಲಿಕ್ಕೆ ಬರೆದು ಕಳುಹಿಸ ಬೇಕಾಗುತ್ತದೆ; ಮತ್ತು ಆ ಬಗ್ಗೆ ಉತ್ತರ ನೀಡಲು ಸಂಬಂಧಪಟ್ಟ ಮಂತ್ರಿಗಳು ಸಿದ್ಧತೆ ಮಾಡಿಕೊಂಡು ಬರಬೇಕಾಗುತ್ತದೆ. ವಿಷಯಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಸಂಗ್ರಹಿಸಿಕೊಂಡು ಸಭೆಗೆ ಬರ

ಬೇಕಾಗುತ್ತದೆ. ತಾವು ಹೇಳುವ ಹಾಗೆ ಕನ್‌ಸೆಂಟ್ ಕೊಡತಕ್ಕದ್ದು ಬಿಡತಕ್ಕದ್ದು ಮೂವರ್ ಆಫ್ ದಿ ಮೋಷನ್ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಮೇಲೆ. ಆದ್ದರಿಂದ ತಾವು ಮೂನ್ಯ ಸದಸ್ಯರಿಗೆ ಒಂದು ಅವಕಾಶ ಕೊಟ್ಟು ಯಾವ ಕಾರಣಕ್ಕೋಸ್ಕರ ಅನುಮತಿ ಕೊಡಬೇಕೆಂಬ ಬಗ್ಗೆ ಒಂದು ಬ್ರೀಫ್‌ಸ್ಟೇಟ್ ಮೆಂಟ್ ಮಾಡುವುದಕ್ಕೆ ಅವಕಾಶ ನೀಡಿ, ಅದು ತಮಗೆ ಕನ್‌ವಿನ್ಸ್ ಆದರೆ ಆಮೇಲೆ ತಾವು ಅದಕ್ಕೆ ಅನುಮತಿ ಕೊಡತಕ್ಕದ್ದು ಅಥವಾ ಕನ್‌ವಿನ್ಸ್ ಆಗದಿದ್ದರೆ ತಿರಸ್ಕರಿಸತಕ್ಕದ್ದು. ಆ ಬಗ್ಗೆ ತಮಗೆ ಪೂರ್ಣ ಅಧಿಕಾರ ಇದೆ. ಆದರೆ ಅದನ್ನು ಬಿಟ್ಟು ಅಡ್ಜರ್ನ್‌ಮೆಂಟ್ ಮೋಷನ್ನನ್ನು ಮೂರನೇ ದಿವಸ ತೆಗೆದುಕೊಳ್ಳುತ್ತೇವೆಂದರೆ ಏನೂ ಮಹತ್ವ ಉಳಿಯುವುದಿಲ್ಲ; ಪೂರ್ಣ ಮಹತ್ವ ಹಾಳಾಗುತ್ತದೆ. ಏಕೆಂದರೆ ಈವರೆಗೆ ನಡೆದುಕೊಂಡು ಬಂದಿರುವ ಒಂದು ಸಂಪ್ರದಾಯ ಏನೆಂದರೆ ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟರೆ ಆ ದಿವಸದ ಎಲ್ಲಾ ಕಾರ್ಯಕಲಾಪಗಳನ್ನು ಮುಂದೂಡಿ ಆ ವಿಷಯವನ್ನು ಜರೂರಾಗಿ ತೆಗೆದುಕೊಳ್ಳುವುದು. ಆ ವಿಷಯದ ತೀವ್ರತೆಯನ್ನು ಈ ಸದನ ಮನಗಂಡರೆ, ಮೂನ್ಯ ಅಧ್ಯಕ್ಷರವರಿಗೆ ಮನವರಿಕೆಯಾದರೆ ಆ ದಿನದ ಎಲ್ಲಾ ಕಾರ್ಯಕಲಾಪಗಳನ್ನು ಮುಂದೂಡಿ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ದಿವಸ ತಾವೇನಾದರೂ ಒಂದು ನಿರ್ಣಯವನ್ನು ಕೊಟ್ಟರೆ ಅದು ಮುಂದೆ ಕೇವಲ ಒಂದು ಸಂಪ್ರದಾಯ ವಾಗದೆ ಈ ಸದನದ ಕಾರ್ಯಕಲಾಪಗಳಿಗೆ ಮಾರ್ಗದರ್ಶವಾಗಬೇಕು. ಈ ಸಂದರ್ಭದಲ್ಲಿ ಮೂನ್ಯ ವಿರೋಧ ಪಕ್ಷದ ನಾಯಕರು ಸರ್ಕಾರೀ ಕಾರ್ಯಕಲಾಪಕ್ಕೆ ಮುಂಚೆ ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ಪ್ರಸ್ತಾಪ ಮಾಡಬೇಕಾಗಿತ್ತು; ಆ ಕ್ರಮದಲ್ಲಿ ಲೋಪ ವಾಗಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಯಾವುದೇ ದಿವಸ ೨ ಗಂಟೆ ಮುಂಚೆ ಕೊಟ್ಟಂತಹ ಅಡ್ಜರ್ನ್‌ಮೆಂಟ್ ಮೋಷನ್ನನ್ನು ರೂಲ್ ೫೧ ರ ಕೆಳಗೆ ಏನು ಕ್ರಮ ಇದೆ ಅದನ್ನು ಅನುಸರಿಸಿ ಕಡೆಗೆ ತಾವು ಅದು ಅಂಥ ಮಹತ್ವವಾದ ವಿಷಯವಲ್ಲ ಎಂದರೆ ತಿರಸ್ಕರಿಸಬಹುದು, ಇಲ್ಲದಿದ್ದರೆ ಚರ್ಚಿಸಲಿಕ್ಕೆ ಅನುವು ಮಾಡಿಕೊಡಬೇಕು. ಆದರೆ ನಾಳೆ ತೆಗೆದುಕೊಳ್ಳುತ್ತೇವೆಂದು ಹೇಳತಕ್ಕದ್ದು ಸೂಕ್ತವಾಗಿ ಕಾಣುವುದಿಲ್ಲ. ಒಟ್ಟಿನಲ್ಲಿ ರೂಲ್ಸ್ ಆಫ್ ಪ್ರೊಸೀಜರನ್ನು ಫಾಲೋ ಮಾಡಿ ಒಂದು ಒಳ್ಳೆಯ ಸಂಪ್ರದಾಯವನ್ನು ಹಾಕಿಕೊಡಬೇಕೆಂದೂ ಮುಂದೆ ಈ ರೀತಿ ಆಗುವುದಕ್ಕೆ ಅವಕಾಶವಾಗ ಬಾರದೆಂದು ಆಶಿಸುತ್ತೇನೆ.

SRI BHASKAR NAIDU.—Sir. how does rule 51 preceed rule 50? When the consent of the Speaker has not been obtained according to rule 50. how does rule 51 come in?. It is entirely in the hands of the Speaker either to give or not to give permission. The Speaker is placed in the highest pedestal in this House. When the speaker himself says that he will take it up tomorrow, how does rule 51 come in ?

SRI M.C. NANAIAH.—Sir, the Leader of the Janatha Party has rightly pointed out one issue *viz*, that this issue shall be taken up at the beginning of the session before any item in the list of business is taken up for discussion. As far as the House is concerned, we have already taken up the business on the list. When the members who have given notice of it did not take objection when the list of business was taken up, the adjournment motion lapses into insignificance. Therefore this House cannot take it up today. He has to move it tomorrow ter giving two months notice.

SRI S. R. BOMMAI.—There are new members who have come here. They have to learn certain parliamentary conventions. So far as an adjournment motion is concerned, before the Speaker gives consent, there is a convention both in the House of Commons, in the Parliament and in this House and it is that the mover has a right to speak and try to get the consent of the Speaker. I am now at that stage

and am trying to get the consent. That is rule 50. If consent is given then the business of the House will be adjourned and the motion will be taken up. I would request my colleague to read the parliamentary procedure and rules in this behalf. My hon. Friend Sri Deve Gowda referred to the lapse on my part. I may tell him that I did rise and did try to catch the eye of the Chair but was not able to do so. Meanwhile the Finance Minister was called upon. I was alert enough. Sometimes things happen like that. Since today already a ruling has been given by the Chair I will respect it. But in future adjournment motion should be given top priority under the rules and the concerned Minister is expected to be present and if he is unable to present any other Minister on his behalf may answer. This is an important matter and may be taken up tomorrow.

MR. SPEAKER.—The notice of adjournment motion should be given two hours before the sitting of the House According to the regular business of the Hon. Finance Minister has already moved the motion I asked the Hon. Finance Minister whether he has any points to be clarified and he said 'no'. I have received a list of names of members who desire to speak. Now I call upon Sri S. R. Bommai to speak on the Supplementary Demands.

Supplementary Demands for Grants

(Debate Continued)

† ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಮಾನ್ಯ ಸಭಾದ್ಯಕ್ಷರೇ, ಈ ದಿವಸ ಈ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಬಗ್ಗೆ ಮಾತನಾಡುವಾಗ ನನಗೆ ಒಂದು ರೀತಿಯಾಗಿ ಆಶ್ಚರ್ಯವಾಗುತ್ತಾ ಇದೆ, ಏತಕ್ಕೆಂದರೆ ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ಗೂ ಮತ್ತು ಮೈನ್ ಬಜೆಟ್‌ಗೂ ಏನೂ ವ್ಯತ್ಯಾಸ ಇಲ್ಲವೊ ಏನೋ ಎಂದು ನನಗೆ ಅನಿಸುತ್ತದೆ. ಹಿಂದಿನ ಒಂದು ವರ್ಷದ ಬಡ್ಜೆಟ್ಟಿನಲ್ಲಿ ಬಹುಶಃ ಳಿಲಳಿ ಕೋಟಿ ಇರಬಹುದು ಎಂದು ನನಗೆ ತೋರುತ್ತದೆ. ಸರಿಯಾಗಿ ಜ್ಞಾಪಕ ಇಲ್ಲ, ಈವೊತ್ತಿನ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನಲ್ಲಿ ನೋಡಿದರೆ ೨೦೮.೭೯ ಕೋಟಿ ರೂಪಾಯಿ ಇದೆ. ಇದಕ್ಕೆ ನಾವು ಒಪ್ಪಿಗೆ ಕೊಡಬೇಕಾಗಿದೆ, ಸ್ವಾಮಿ,ಇದು ಏನು ತೋರಿಸುತ್ತದೆ ಎಂದರೆ ಸರ್ಕಾರಕ್ಕೆ ತಾನು ಮಾಡತಕ್ಕಂಥಾ ಕಾರ್ಯಗಳ ಬಗ್ಗೆ ಮತ್ತು ಕಾರ್ಯ ಕಲಾಪಗಳ ಬಗ್ಗೆ ಸ್ಪಷ್ಟವಾದ ಪುತ್ತು ನಿಶ್ಚಲವಾದ ಚಿತ್ರ ಇಲ್ಲ, ಅಥವಾ ಲೆಕ್ಕಾಚಾರ ಇಲ್ಲ ಏನ್ನುವುದು ತೋರಿಸುತ್ತದೆ. ಒಟ್ಟಿನಲ್ಲಿ ಸರ್ವಸಾಮಾನ್ಯವಾಗಿ ಇದನ್ನು ಖರ್ಚು ಮಾಡುವುದಕ್ಕೆ ಈ ಎರಡೂ ಮನೆಗಳ ಒಪ್ಪಿಗೆ ಪಡೆಯಬೇಕಾದ್ದು ಸರ್ಕಾರದ ಕರ್ತವ್ಯವಾಗಿದೆ. ಕೆಲವೊಂದು ಪ್ರಸಂಗದಲ್ಲಿ ಅನಿವಾರ್ಯವಾಗಿ ಹೊಸ ಯೋಜನೆಗಳನ್ನು ಮಾಡಬೇಕಾಗುತ್ತದೆ ಅಥವಾ ಒಂದು ಅಭಿವೃದ್ಧಿ ಕಾರ್ಯಕ್ರಮ ಹಾಕಿಕೊಂಡರೆ ಲೆಕ್ಕಾಚಾರ ಹಾಕಿಕೊಂಡಂತೆ ಆಗುವುದಿಲ್ಲ, ಅದಕ್ಕಿಂತ ಹೆಚ್ಚು ಖರ್ಚು ಮಾಡಬೇಕಾಗುವ ಪ್ರಸಂಗ ಬರುತ್ತದೆ. ಅಂಥಾ ಪ್ರಸಂಗದಲ್ಲಿ ಹೆಚ್ಚು ಖರ್ಚು ಮಾಡತಕ್ಕಂಥಾ ಸಂದರ್ಭ ಬಂದಾಗ ಅದು ಈ ಮನೆಯ ಒಪ್ಪಿಗೆಗಾಗಿ ಬರಬೇಕಾದಂಥಾ ಪ್ರಸಂಗ ಬರುವುದರಿಂದ ಅದಕ್ಕಾಗಿ ಆರ್ಟಿಕಲ್ ೨೦೫ (೧)ರ ಕಾನ್ಸ್ಟಿಟ್ಯೂಷನ್ ಪ್ರಕಾರ ಈ ಸಭೆಯ ಮುಂದೆ ಬರುತ್ತದೆ.

[MR. CHAIRMAN (SRI M. C. NANAIAH) in the Chair]

ಆದರೆ ಅದರ ಉಪಯೋಗವನ್ನು ಸರಿಯಾಗಿ ಮಾಡುತ್ತಾ ಇಲ್ಲ ಎಂದು ಹೇಳುತ್ತೇನೆ. ಅಂದರೆ ಇದನ್ನು ದುರುಪಯೋಗ ಮಾಡುತ್ತಾರೆ ಅನ್ನುವ ಅರ್ಥವಲ್ಲ. ಅದು ಅನ್‌ಡ್ಯೂ ಅಡ್ವಾಂಟೇಜ್ ಆಗುತ್ತಾ ಇದೆ ಎಂದು ಅಷ್ಟು ಮಾತ್ರ ಹೇಳುತ್ತೇನೆ. ಈ ಬಗ್ಗೆ ನಾನು ಕೆಲವು ಡಿಮ್ಯಾಂಡ್‌ಗಳ ಬಗ್ಗೆ ಮಾತ್ರ ಹೇಳುತ್ತೇನೆ. ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಸ್ವಾಮಿ, ಸರ್ಕಾರ ಈ ಬಜೆಟ್ಟಿನಲ್ಲಿ ಕೆಲವು ಯೋಜನೆಗಳನ್ನು ಕಾರ್ಯಗತ ಮಾಡುತ್ತಾ ಬಂತು. ಆಷ್ಟರಲ್ಲೇ ಮುಂದಿನ ಚುನಾವಣೆಯೂ ಸಹ ಬಂತು. ನಂತರ ಚುನಾವಣೆ ಮೇಲೆ ಕಣ್ಣಿಟ್ಟು ಕೆಲವೊಂದು ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಅದಕ್ಕಾಗಿ ಸರ್ಕಾರ ಖರ್ಚು ಮಾಡಿರತಕ್ಕಂಥಾ ಸುಮಾರು ೨೦ ಕೋಟಿ ರೂಪಾಯಿಗಳಷ್ಟು ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಡಿಮ್ಯಾಂಡ್ಸ್ ಬಗ್ಗೆ ಈ ಮನೆಯ ಒಪ್ಪಿಗೆಯನ್ನು ಕೇಳಬೇಕಾದ ಪ್ರಸಂಗ ಬಂದಿದೆ. ಇಂತಹ ಕೆಲವು ಡಿಮ್ಯಾಂಡ್ಸ್ ಬಗ್ಗೆ ಉದಾಹರಣೆಗಳನ್ನು ತಮ್ಮ ಮುಂದೆ ತರಲಂ ಬಯಸುತ್ತೇನೆ.

ಮೊದಲನೆಯದಾಗಿ ಡಿಮ್ಯಾಂಡ್ ನಂಬರ್ ೨೨ರಲ್ಲಿ ಪೇಜ್ ೨೨ರಲ್ಲಿ ಕೊಟ್ಟಿರತಕ್ಕಂಥಾ ಎಕ್ಸ್‌ಪ್ಲನೇಟರಿ ನೋಟ್‌ನಲ್ಲಿ ಐಟಂ ನಂ. ಒಂದು ಮತ್ತು ಮೂರರಲ್ಲಿ ನೋಡಿದರೆ ಬೇಕಾದಷ್ಟು ಸ್ಕೀಂಗಳನ್ನು ಕೊಟ್ಟಿದ್ದಾರೆ. ಕೆಲವು ಆಫೀಸರ್ಸ್‌ಗಳನ್ನು ಹೆಚ್ಚು ಮಾಡಿದ್ದಾರೆ, ಇದಲ್ಲದೆ ಒಂದು ಹೊಸ ಸ್ಕೀಂ ಕ್ರಿಯೇಟ್ ಮಾಡಿ ನ್ಯೂ ಡೈರಕ್ಟೊರೇಟ್‌ಗೆ ೧೭ ಲಕ್ಷ ೪೨ ಸಾವಿರದ ೭೮೫ ರೂಪಾಯಿನ ಖರ್ಚು ಕೂಡ ತೋರಿಸಿದ್ದಾರೆ. ನ್ಯೂ ಸರ್ವಿಸ್ ಅಂತ ತೋರಿಸಿ ಇಷ್ಟು ಹಣ ಖರ್ಚು ತೋರಿಸಿದ್ದಾರೆ. ಆದರೆ ನಾನು ಹೇಳುವುದು ಏನೆಂದರೆ ಬರೇ ಆಫೀಸರ್ಸ್‌ಗಳನ್ನು ಹೆಚ್ಚು ಮಾಡಿದ್ದಾರೇ ವಿನಾ ಇದರ ಬಗ್ಗೆ ಸರಿಯಾಗಿ ಇಂಪ್ಲಿಮೆಂಟ್ ಆಗಿಲ್ಲಾ. ಇದರಲ್ಲಿ ನಿರುದ್ಯೋಗ ಸಮಸ್ಯೆಯ ಬಗ್ಗೆ ಏನು ಹೇಳಿದ್ದಾರೋ ಅದೂ ಕೂಡ ಸರಿಯಾಗಿ ಆಗಿಲ್ಲಾ. ಹಾಗೆಯೇ ಡಿಮ್ಯಾಂಡ್ ನಂಬರ್ ೨೬ರ ಬಗ್ಗೆ ಹೌಸಿಂಗ್ ಬಗ್ಗೆ ಹೇಳುವುದಾದರೆ ಇದರ ಎಕ್ಸ್‌ಪ್ಲನೇಟ್ ನೋಟ್‌ನಲ್ಲಿ ಐಟಂ ನಂಬರ್ ೩ರಲ್ಲಿ ಕೊಟ್ಟಿರುವಂತೆ ೩೭.೬೪ ಲಕ್ಷ ರೂಪಾಯಿಗಳು. ಈ ಯೋಜನೆ ಸರಿಯಾಗಿ ಕಾರ್ಯಗತವಾಗಿದೆಯೇ ಇಲ್ಲವೇ ಗೊತ್ತಿಲ್ಲ. ಆದುದರಿಂದ ಇದನ್ನೆಲ್ಲಾ ನ್ಯೂ ಸರ್ವಿಸಸ್ ಅಂತ ಸೇರಿಸಿದ್ದೀರಿ. ಇದರ ಅರ್ಥವೇ ನನಗೆ ಆಗಿಲ್ಲಾ.

3-00 ಪಿ.ಎಂ.

ಸ್ವಾಮಿ, ತಾವು ಈ ನ್ಯೂ ಸರ್ವೀಸಸ್ ಎಂದು ಏನು ಹೇಳುತ್ತೀರಾ ಇದು ನನಗೆ ಅರ್ಥವಾಗುತ್ತಾ ಇಲ್ಲ. ನಾನು ಪಬ್ಲಿಕ್ ಅಕೌಂಟ್ಸ್ ಕಮಿಟಿ ಸದಸ್ಯನಾಗಿ ಬೇರೆ ಬೇರೆ ರಾಜ್ಯಗಳ ಪ್ರವಾಸ ಮಾಡಿದ್ದೇನೆ. ನ್ಯೂ ಸರ್ವೀಸಸ್ ಯಾವಾಗ ಹೇಳಬೇಕು ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಬಡ್ಜೆಟ್ ಪಾಸ್ ಆದ ನಂತರ ೮-೯ ತಿಂಗಳ ಮೇಲೆ ಮುಂದಿನ ಹೊಸ ಬಡ್ಜೆಟ್ ಪ್ರಾರಂಭವಾಗುವುದಕ್ಕೆ ಮುಂಚೆ ಯೋಚನೆ ಮಾಡಿ ಹಣ ಖರ್ಚು ಮಾಡಿದರೆ ಅದು ನ್ಯೂ ಸರ್ವೀಸಸ್ ಆಗುವುದಿಲ್ಲ. ನ್ಯೂ ಸರ್ವೀಸಸ್ ಅಂದರೆ ರಾಜ್ಯದಲ್ಲಿ ಯಾವುದು ಒಂದು ಪರಿಸ್ಥಿತಿ ನಿರ್ಮಾಣವಾಗುತ್ತದೆ, ಆ ಕೆಲಸವನ್ನು ಮಾಡಲೇಬೇಕಾಗುತ್ತದೆ. ಅಂತಹ ಪರಿಸ್ಥಿತಿ ಉತ್ಪನ್ನವಾದಾಗ ಹೊಸ ಕೆಲಸ ಪ್ರಾರಂಭ ಮಾಡಿದರೆ ನ್ಯೂ ಸರ್ವೀಸಸ್ ಆಗುತ್ತದೆ. ಮನೆ ಕಟ್ಟತಕ್ಕಂತಹ ಯೋಜನೆ ಸುಮಾರು ೨೦ ವರ್ಷಗಳಿಂದಲೂ ನಡೆದುಕೊಂಡು ಬಂದಿದೆ. ಮನೆ ಕಟ್ಟತಕ್ಕದ್ದು, ಡೈರೆಕ್ಟರ್ ಆಫ್ ಪೆಕೇಷನಲ ಸರ್ವೀಸಸ್ ಮಾಡತಕ್ಕದ್ದು, ಹಾಗೆ ಡಿಮ್ಯಾಂಡ್ ನಂಬರ್ ೩೦ರಲ್ಲಿ ಸೋಷಿಯಲ್ ಸರ್ವೀಸ್‌ನಲ್ಲಿ ಕೆಲಸ ಕೊಡತಕ್ಕುದ್ದು. ಸ್ಕಾಲರ್‌ಷಿಪ್ ಕೊಡತಕ್ಕದ್ದು, ಇದರಲ್ಲಿ ಏನಾಗಿದೆ ಎಂದರೆ ಬ್ಯಾಕ್‌ವರ್ಡ್ ಕ್ಲಾಸ್ ವಿದ್ಯಾರ್ಥಿಗಳಿಗೆ ಅಂದರೆ ಮಿಡಲ್ ಸ್ಕೂಲ್ ವಿದ್ಯಾರ್ಥಿಗಳಿಗೆ ೫೦ ರೂಪಾಯಿ, ಹೈಸ್ಕೂಲ್ ವಿದ್ಯಾರ್ಥಿಗಳಿಗೆ ೭೫ ರೂಪಾಯಿ, ಕಾಲೇಜು ವಿದ್ಯಾರ್ಥಿಗಳಿಗೆ ೧೦೦ ರೂಪಾಯಿ, ಈ ರೀತಿ ಒಟ್ಟು ೨ ಕೋಟಿ ೨೮ ಲಕ್ಷದ ೫೦ ಸಾವಿರ ರೂಪಾಯಿ ಕೊಡತಕ್ಕದ್ದನ್ನು ಯೋಚಿಸಿದ್ದೀರಿ. ಇನ್ನು ಎಜುಕೇಟೆಡ್ ಅನ್‌ಎಂಪ್ಲಾಯ್ ಮೆಂಟ್ ಬಗ್ಗೆ ಚುನಾವಣೆಗೆ ಮುನ್ನಾ ಆದಕ್ಕೂ ಕೂಡ ೨ ಕೋಟಿ ರೂಪಾಯಿ ಕೇಳಿದ್ದೀರಿ. ಇವೊತ್ತು ಏನೊಂದು ತಾವು ಹರಿಜನ ಗಿರಿಜನರಿಗೆ, ಹಿಂದುಳಿದ ವಿದ್ಯಾರ್ಥಿಗಳಿಗೆ ಕೊಡತಕ್ಕ ಸ್ಕಾಲರ್‌ಷಿಪ್, ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕ ಯೋಜನೆ. ಇವುಗಳೆಲ್ಲಾ ಏನಿದೆ ಅದಕ್ಕೆ ನಾನು ವಿರೋಧ ಇಲ್ಲ. ಇದರ ಬಗ್ಗೆ ನಮ್ಮ ಪಕ್ಷದ ಧ್ಯೇಯ ಸ್ಪಷ್ಟವಾಗಿದೆ. ಇವುಗಳನ್ನು ೧೯೭೭-೭೮ನೇ ಬಡ್ಜೆಟ್‌ನಲ್ಲಿ ಏತಕ್ಕೆ ತೋರಿಸಲಿಲ್ಲ ಎಂದು ನನ್ನ ಪ್ರಶ್ನೆ. ಈ ಮನೆಯ ಮುಂದೆ ಅಧಿಕೃತವಾಗಿ ಹಣವನ್ನು ಪಡೆಯಬೇಕಾಗಿತ್ತು. ಅದನ್ನು

ಮಾಡಲಿಲ್ಲ, ಈ ಸಂದರ್ಭದಲ್ಲಿ ಇಂಗ್ಲೀಷ್ ರಾಜಕಾರಣಿ ಹೇಳಿದ ಮಾತು ಒಂದು ನೆನಪಿಗೆ ಬರುತ್ತದೆ, ಅವರು ಚರ್ಚಿಲ್, ಅವರು ಈ ಜಗತ್ತಿನಲ್ಲೇ ಒಬ್ಬ ಉತ್ತಮ ರಾಜಕಾರಿಣಿ ಎನ್ನುವುದನ್ನು ನಾವು ಒಪ್ಪಬೇಕು. ಅವರು ಏನು ಹೇಳಿದ್ದಾರೆ ಎಂದರೆ :

"A politician has an eye on elections ; a statesman has an eye on the next generation."

ತಾವು ಚುನಾವಣೆಯನ್ನು ಮುಂದೆ ಇಟ್ಟುಕೊಂಡು ಕಾರ್ಯಕ್ರಮ ಹಾಕಿಕೊಳ್ಳಬಾರದು. ಜನತೆಯ ಉದ್ಧಾರಕ್ಕೆ ಕಾರ್ಯಕ್ರಮ ಹಾಕಿಕೊಳ್ಳುವಾಗ ಒಳ್ಳೆಯ ಉದ್ದೇಶದಿಂದ ಲೆಕ್ಕಾಚಾರವಾಗಿ ಕಾರ್ಯಕ್ರಮ ಹಾಕಿಕೊಳ್ಳಬೇಕು.

SRI S. M. YAHYA.—We have proved to be both, politicians as well as statesmen, and therefore we are here.

SRI S. R. BOMMAI.—You can fool people for some time, not always ತಾವು ಇಪ್ಪತ್ತಿನ ದಿವಸ ಅಧಿಕಾರದಲ್ಲಿ ಬಂದಿದ್ದೀರಿ, ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಇನ್ನು ಮುಂದಾದರೂ ಕೂಡ ಚೆನ್ನಾಗಿ ನಡೆಸಿ ಎಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ಮೊದಲು ಚೆನ್ನಾಗಿ ನಡೆಸಿದ್ದೇವೆ, ಈಗಲೂ ಕೂಡ ಚೆನ್ನಾಗಿ ನಡೆಸುತ್ತಿದ್ದೇವೆ.

ಶ್ರೀ ಎಸ್. ಆರ್, ಬೊಮ್ಮಾಯಿ.—ಒಟ್ಟು ನೂರಕ್ಕೆ ೭೦ರಷ್ಟು ಜನರು ತಮಗೆ ಮತ ಕೊಟ್ಟಿಲ್ಲ.

SRI S. M. YAHYA.—According to the present system we are here.

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನು ನಾನು ಸಪ್ಲಿಮೆಂಟರಿ ಡಿಮ್ಯಾಂಡ್ ಬಗ್ಗೆ ಹೇಳಬೇಕಂ ಎಂದರೆ ಈ ಮನೆಯ ಹಕ್ಕಿಗೆ ಚ್ಯುತಿ ಬಂದಿದೆ ಎಂದು ಹೇಳಬೇಕಾಗಿದೆ. ಸರ್ಕಾರಿ ಹಣ ಖರ್ಚು ಮಾಡುವಾಗ ಈ ಮನೆಯ ಒಪ್ಪಿಗೆ ಪಡೆದುಕೊಂಡು ಮಾಡಬೇಕು. ಯಾವ ಪ್ರಸಂಗದಲ್ಲಿ ಅದನ್ನು ಮಾಡಬೇಕು ಎನ್ನುವುದನ್ನು ನಾವು ನೋಡಿದ್ದೇನೆ .. Article 205 (1) lays down certain criteria. ಇದು ಆ ಕ್ರೈಟೀರಿಯಂದೊಳಗೆ ಬರುವುದಿಲ್ಲ. ಹೊಸ ಹೊಸ ಚುನಾವಣೆ ಮುಂದೆ ಮಾಡಿರುವುದು ಸರಿಯಲ್ಲ. ತಾವು ಆ ರೀತಿ ಮಾಡುವುದು ಇದ್ದರೆ ೧೯೭೭–೭೮ರ ಬಡ್ಜೆಟ್ಟಿನಲ್ಲೇ ಇಳವಡಿಸಬೇಕಿತ್ತು. ಈ ಮನೆಯ ಒಪ್ಪಿಗೆ ಇಲ್ಲದೆ ಇಷ್ಟು ದೊಡ್ಡ ಮೊತ್ತದ ಹಣವನ್ನು ಖರ್ಚು ಮಾಡುವುದು ಸರಿಯಲ್ಲ. ನಮ್ಮ ಒಪ್ಪಿಗೆ ಇಲ್ಲದೆ ಇಷ್ಟು ದೊಡ್ಡ ಮೊತ್ತದ ಹಣವನ್ನು ಖರ್ಚು ಮಾಡಿದ್ದೀರಿ. ಇನ್ನು ತಾವು ಗುಡಿಸಲು ಕಟ್ಟಿಸಿರುವ ಬಗ್ಗೆ ಹೇಳಬೇಕು ಎಂದರೆ, ಇಪ್ಪತ್ತು ೨೫೦ ರೂಪಾಯಿಗಳಲ್ಲಿ ಸರಿಯಾದಂಥ ಗುಡಿಸಲುಗಳನ್ನ ಕಟ್ಟಿಸಲಿಕ್ಕೆ ಸಾಧ್ಯವೆ. ಯಾವುದಾದರೂ ಒಂದು ಕಾರ್ಯಕ್ರಮ ಹಾಕಿಕೊಂಡರೆ ಜನರಿಗೆ ಅದರಿಂದ ಸರಿಯಾಗಿ ಉಪಯೋಗವಾಗುವಂತೆ ಇರಬೇಕು.

ಶ್ರೀ ಎಸ್. ಎಂ. ಯಾಹ್ಯಾ.—ಏನೂ ಇಲ್ಲದವರಿಗೆ ಗುಡಿಸಲೇ ಬಹಳ ದೊಡ್ಡದಾಗಿರುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಪ್ರಚಾರದ ಅಬ್ಬರವನ್ನು ಬಿಡಬೇಕು. ತಮಗೆ ಇನ್ನು ೫ ವರ್ಷಗಳ ಕಾಲ ಅವಕಾಶ ಇದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ನೆನ್ನೆಯ ದಿವಸ ತಮ್ಮ ಭಾಷಣದಲ್ಲಿ ೨೫೦ ರೂಪಾಯಿಯಂತೆ ಒಂದು ವರ್ಗದ ಮನೆ ಕಟ್ಟಲಿಕ್ಕೆ, ೧,೨೫೦ ರೂಪಾಯಿಯಂತೆ ಒಂದು ವರ್ಗದ ಮನೆ ಕಟ್ಟಲಿಕ್ಕೆ, ೨,೨೫೦ ರೂಪಾಯಿಯಂತೆ ಒಂದು ವರ್ಗದ ಮನೆ ಕಟ್ಟಲಿಕ್ಕೆ ಸಹಾಯ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಆದುದರಿಂದ ಈ ಮೂರು ಕ್ಯಾಟಗರಿ ಮನೆಗಳು ಯಾವ ಯಾವ ತಾಲೂಕುಗಳಲ್ಲಿ, ಯಾವ ಯಾವ ವಿಲೇಜ್‌ಗಳಲ್ಲಿ ಎಷ್ಟೆಷ್ಟು ಕಟ್ಟಿಸಿದ್ದಾರೆ ಆ ವಿಲೇಜ್ ಹೆಸರು ಸಹಿತ ಒಂದು ಪಟ್ಟಿಯನ್ನು ಮಾನ್ಯ ಮಂತ್ರಿಗಳು ಈ ಸದನದಲ್ಲಿ ಇಡಬೇಕು ಎಂದು ಮನವಿ ಮಾಡುತ್ತೇನೆ. ವಿರೋಧಪಕ್ಷದ ಸಾಯಂಕರು ಪಬ್ಲಿಕ ಆಕೌಂಟ್ಸ್ ಕಮಿಟಿ ಛೇರ್‌ಮನ್‌ರಾಗಿರುತ್ತಾರೆ, ಅವರು ಈ ಅಧಿವೇಶನ ಮುಗಿದ ಹೋಲೆ ೨೫೦ ರೂಪಾಯಿಗಳ ಮನೆಗಳನ್ನು ಎಲ್ಲೆಲ್ಲಿ ಕಟ್ಟಿಸಿದ್ದಾರೆ, ಆ ದುಡ್ಡು ಯಾರ ಯಾರ ಜೇಬಿಗೆ ಹೋಗಿದೆ ಅದನ್ನು ನೋಡಲಿಕ್ಕೆ, ಈ ಸದನ ಅಧಿಕಾರ ಕೊಡುತ್ತದೆ ಆದ್ದರಿಂದ ಮಾನ್ಯ ಮಂತ್ರಿಗಳು ಒಂದು ಪಟ್ಟಿಯನ್ನು ಈ ಸಭೆಯ ಮುಂದೆ ಇಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.–ಇವೊತ್ತು ೨೫೦ ರೂಪಾಯಿಗಳಲ್ಲಿ ಗುಡಿಸಲನ್ನು ಕಟ್ಟುವಂತಹ ಕೆಲಸ ಆಗಿಲ್ಲ. ಅನೇಕ ಕಡೆಗಳಿಗೆ ಹಣವನ್ನು ಕೊಟ್ಟಿದ್ದಾರೆ, ಆದರೆ ಗುಡಿಸಲು ಮಾತ್ರ ಇಲ್ಲ, ಆ ಒಂದು ದೃಷ್ಟಿಯಿಂದ ಮಾನ್ಯ ದೇವೇಗೌಡರು ತಮ್ಮನ್ನು ಒಂದು ಲಿಸ್ಟ್ ಕೇಳುತ್ತಿದ್ದಾರೆ ಇವೊತ್ತು ಮನೆ ಇಲ್ಲದವರಿಗೆ ಮನೆ ಕಟ್ಟಿಸಿಕೊಡತಕ್ಕಂಥಾದ್ದು ಉತ್ತಮ ಕಾರ್ಯ, ಆದರೆ ಆ ರೀತಿ ಅವರಿಗೆ ಮನೆ ಕಟ್ಟಿಸಿಕೆ ಡುವಾಗ ಸರಿಯಾದಂಥ ಮನೆ ಕಟ್ಟಿಸಿಕೊಡಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಹಿಂದೆ ೧೯೭೦-೭೧ರಲ್ಲಿ ಬಾಂಗ್ಲಾ ದೇಶದ ಯುದ್ಧ ಆಯಿತು. ಆಗ ಯುದ್ಧಕ್ಕೆ ಸಂಬಂಧಪಟ್ಟಂತೆ ಟ್ಯಾಕ್ಸ್ ಹಾಕಿದ್ದರು, ಯುದ್ಧ ಮುಗಿದ ಮೇಲೆ ಅದನ್ನು ರದ್ದು ಮಾಡಬೇಕು ಎನ್ನುವ ಕಾಲದಲ್ಲಿ ಈ ಹಣವನ್ನು ಜನತಾ ಹೌಸಿಂಗ್ ಸ್ಕೀಮಿಗೆ ಉಪಯೋಗ ಮಾಡಬೇಕಾಗುತ್ತದೆ ಎಂದು ಕೇಳಿದಾಗ ಇದು ಒಳ್ಳೆಯ ಆದ್ದೇಶ ಎಂದು, ಯುದ್ಧ ಕಾಲದಲ್ಲಿ ಹಾಕಿದಂಥ ತೆರಿಗೆಯನ್ನು ಇದಕ್ಕೆ ಉಪಯೋಗಿಸಲಿಕ್ಕೆ ಸರ್ವಾನುಮತದಿಂದ ನಿರ್ಣಯ ಮಾಡಿದ್ದೇವೆ. ಅದನ್ನು ನಾವೊಬ್ಬರೇ ಮಾಡಿದ್ದು ಎಂದು ಬೆನ್ನು ತಟ್ಟಿಕೊಳ್ಳುವುದಿಲ್ಲ. We had unanimously decided to extend that benefit. The Government need not take credit for this action. In election all this propaganda will go on. I wanted to bring to the notice of the Leader of the Opposition how this House had taken a decision.

SRI S. M. YAHYA.—We are very grateful to the house of its unanimous decision. Many decision had been taken by the House, we are proud because, we have implemented it.

SRI H. D. DEVE GOWDA.—The Minister is paid for it. We are here to point out the dereliction of the duty on the part of the Minister. He is answered to this house if there is any irregularity. This House has got the authority to pull you up if anything goes wrong.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಧ್ಯಕ್ಷರೆ, ನಾನು ಆಗಲೇ ಹೇಳುತ್ತಿದ್ದುದು ಏನೆಂದರೆ, ಈ ಸ್ಕೀಂನ್ನು ಚುನಾವಣೆ ಮುಂಚಿತವಾಗಿ ಏನು ಜಾರಿ ಮಾಡಿದ್ದೀರಿ, ಇದು ಸರಿಯಾಗಿ ಜಾರಿಯಾಗಿಲ್ಲ. ಕೇವಲ ೨೦೦ ರೂಪಾಯಿಗಳಲ್ಲಿ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಏನು ಹೇಳಿದ್ದೀರಿ ಅದುಸರಿಯಾಗಿ ಆಗಿಲ್ಲ. ತಾವು ಏನು ಇಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಇದು ಪೂರ್ತಿಯಾಗಿ ವಿನಿಯೋಗವಾಗಿಲ್ಲ, ಮಧ್ಯೆ ಅಪವ್ಯಯವಾಗಿದೆ. ಇದರ ಬಗ್ಗೆ ತಾವು ಯಾವ ರೀತಿ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂಬುದನ್ನು ತಮ್ಮಿಂದ ಕೇಳಬಯಸುತ್ತೇನೆ.

ಇದು ಸಪ್ಲಿಮೆಂಟರಿ ಬಜೆಟ್ ಬಗ್ಗೆ ಒಂದು ಮಾತನ್ನು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಸಭೆಯ ಪ್ಪಿಗೆ ಇಲ್ಲದೆ ಸರ್ಕಾರ ಏನೊಂದು ಇಷ್ಟು ದೊಡ್ಡ ಮೊತ್ತದಲ್ಲಿ ಹಣವನ್ನು ಖರ್ಚು ಮಾಡಿದೆ ಇದು ಸರಿಯಲ್ಲ. ಇನ್ನು ಮುಂದಾದರ ಈ ರೀತಿ ಹಣ ಖರ್ಚು ಮಾಡುವ ಬಗೆ ಒಂದು ಹಿಡಿತ ಇರಬೇಕು.The Legislature must have control over the unexpected budgets of the Government. ಈ ಕಾನ್‌ಸ್ಟಿಟ್ಯೂಷನ್‌ನಲ್ಲಿ ಹೇಳಿರುವ ಮ್ಯಾನ್‌ಡೇಟ್ ಏನಿದೆ ಅದಕ್ಕೆ ವಿರಾರಿ ಸರ್ಕಾರ ಹಣವನ್ನು ಖರ್ಚು ಮಾಡಿದ್ದೇ ಆದರೆ ಈ ಸರ್ಕಾರಕ್ಕೆ ಸರಿಯಾದ ಬುದ್ಧಿಯನ್ನು ಕಲಿಸತಕ್ಕ ಅಧಿಕಾರ ಈ ಸದನದ ಎರಡೂ ಕಡೆಯ ಸದಸ್ಯರಿಗೆ ಇದೆ. ನಾನು ಈ ಮಾತನ್ನು ವಿತಕ್ಕೆ ಹೇಳುತ್ತಿದ್ದೇನೆಂದರೆ, ಅನೇಕ ಜನ ಮಂತ್ರಿಗಳು ತಮ್ಮ ಮನಸ್ಸಿಗೆ ಬಂದಂತೆ ಕಾರ್ಪೊರೇಷನ್‌ಗಳನ್ನು ಮಾಡಿ ತಮಗೆ ಬೇಕಾದವರನ್ನು ಅಲ್ಲಿಗೆ ಅಧ್ಯಕ್ಷರನ್ನಾಗಿ ನೇಮಿಸುತ್ತಾರೆ. ಅಲ್ಲಿನ ಆಡಳಿತಕ್ಕೋಸ್ಕರ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುವುದೇ ಅಲ್ಲದೆ, ಆ ಅಧ್ಯಕ್ಷರಿಗೆ ಕಾರು, ಬಂಗಲೆ, ಫೋನು ಎಲ್ಲಾ ಕೊಡುತ್ತಾರೆ. ಅನಂತರ ಈ ಸಭೆಯು ಒಪ್ಪಿಗೆಯನ್ನು ಕೇಳುತ್ತಾರೆ. ಈ ಹಣವನ್ನು ಮೊದಲೇ ಉಪಯೋಗಿಸಿ ಅನಂತರ ಈ ಮನೆಯ ಒಪ್ಪಿಗೆಯನ್ನು ಕೇಳುವುದರಿಂದ ನಾವೂ ಕೂಡ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ, ಒಂದು ವೇಳೆ ನಾವು ವಿರೋಧ ಪಕ್ಷದವರು

ವಿರೋಧಿಸಿದರೂ, ಆ ಕಡೆಯ ಸದಸ್ಯರು ಇದಕ್ಕೆ ಒಪ್ಪಿಗೆ ಕೊಡುವಾಗ ಸಂಕಟದಲ್ಲಿ ಸಿಕ್ಕಿಬೀಳುತ್ತಾರೆ, According to the whims and fancies of the Minister, certain Corporations have been created.

SRI BHASKAR NAIDU.—That has been perhaps the order of the day from the very beginning.

ಶ್ರೀ ಎಸ್. ಆರ್. ಬೊಮ್ಮಾಯಿ.—ಆದ್ದರಿಂದ ನಾನು ಪ್ರತಿಯೊಬ್ಬ ಸದಸ್ಯರಿಗೂ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಇವತ್ತು ನಮ್ಮ ರಾಜ್ಯದ ಆದಾಯದಲ್ಲಿ ಸುಮಾರು ೨೦೯ ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಈ ಮನೆಯ ಒಪ್ಪಿಗೆ ಇಲ್ಲದೇ ಖರ್ಚು ಮಾಡಿರುವುದನ್ನು ನಾನು ಇಲ್ಲಿ ಟೀಕೆ ಮಾಡುತ್ತಿದ್ದೇನೆ, ನಾನು ಇನ್ನೂ ಎಷ್ಟೋ ವಿಷಯಗಳನ್ನು ಹೇಳುವುದು ಇತ್ತು. ಆದರೆ ಕಾಲಾವಕಾಶ ಇಲ್ಲದೇ ಇರುವುದರಿಂದ ಇಷ್ಟು ಮಾತ್ರ ಹೇಳುತ್ತೇನೆ. ಇನ್ನು ಮುಂದೆ ಈ ರೀತಿ ಸಭೆಯ ಒಪ್ಪಿಗೆ ಇಲ್ಲದೇ ಯಾವುದೇ ಕೆಲಸ ಮಾಡುವುದು ಆಗಲಿ ಅಥವಾ ಹಣವನ್ನು ಖರ್ಚು ಮಾಡುವುದಾಗಲಿ ಸರಿಯಲ್ಲ, ಈ ರೀತಿ ಮಾಡುವುದಾದರೆ ನಾವು ಜನತಾ ಪ್ರತಿನಿಧಿಗಳು ಎಂದು ಹೇಳಿಕೊಳ್ಳುವ ಮಾತಿಗೆ ಬೆಲೆ ಬರುವುದಿಲ್ಲ. ಆದ್ದರಿಂದ ಇನ್ನು ಮುಂದೆ ಈ ಮನೆಯ ಒಪ್ಪಿಗೆ ಇಲ್ಲದೆ ಈ ರೀತಿ ಹಣವನ್ನು ಖರ್ಚು ಮಾಡಬಾರದೆಂದು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಹೇಳಿಕೆಗಳನ್ನು ಮುಂಗಿಸುತ್ತೇನೆ.

ಶ್ರೀ ಪಿ. ಎನ್. ರೆಡ್ಡಿ (ಮಾಲೂರು).—ಮಾನ್ಯ ಸಭಾಧ್ಯಕ್ಷರೆ, ಇವತ್ತು ಈ ಸಪ್ಲಿಮೆಂಟರಿ ಬಡ್ಜೆಟ್ ನಮ್ಮ ಎದುರಿಗೆ ಇದೆ. ನಮ್ಮ ಸರ್ಕಾರದವರು ಹೇಳುತ್ತಿರುವ ಸಮಾಜ ತತ್ವಗಳನ್ನು ನೋಡಿದರೆ ಇದರಲ್ಲಿ ಅನೇಕವನ್ನು ಕಾರ್ಯರೂಪಕ್ಕೆ ತಂದಿದ್ದಾರೆ ಮತ್ತು ತರುತ್ತಿದ್ದಾರೆ.

ಶ್ರೀ ಎಚ್. ಎಂ. ಪಟೇಲ್.—ಸ್ವಾಮಿ, ಮಾನ್ಯ ಸದಸ್ಯರು ''ಸಮಾಜ ತತ್ವಗಳು'' ಎಂದು ಹೇಳುತ್ತಿದ್ದಾರೆ, ಹಾಗೆಂದರೆ ಅದರ ಅರ್ಥ ಏನು ಸ್ವಾಮಿ ?

ಶ್ರೀ ಪಿ. ಎನ್. ರೆಡ್ಡಿ.—ಸಮಾಜ ತತ್ವಗಳು ಎಂದರೆ ''ಸಮಾಜವಾದ ತತ್ವಗಳು'' ಎಂದು ಅರ್ಥ. ಅಂದರೆ ಒಬ್ಬ ಮನುಷ್ಯನಾದವನಿಗೆ ಪ್ರಾಥಮಿಕ ಅವಶ್ಯಕತೆಗಳಾದ ಉಣ್ಣಲು ಅನ್ನ, ಉಡುವುದಕ್ಕೆ ಬಟ್ಟೆ, ವಾಸಿಸುವುದಕ್ಕೆ ಮನೆ, ಮಾಡುವುದಕ್ಕೆ ಉದ್ಯೋಗ, ಇಷ್ಟು ಒದಗಿಸಿದರೆ ಅದೇ ನಿಜವಾದ ಸಮಾಜವಾದ. ಮಾನ್ಯ ವಿರೋಧ ಪಕ್ಷದ ಸದಸ್ಯರು ಸಮಾಜವಾದದ ಬಗ್ಗೆ ಟೀಕೆ ಮಾಡುತ್ತಿದ್ದಾರೆ. ನಾನು ಏತಕ್ಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ಮ್ಯಾನಿಫೆಸ್ಟೋನಲ್ಲಿ ಡೆಮ್ಯಾಕ್ರೆಟಿಕ್ ಸೋಷಿಯಲಿಸಂ ಎಂದು ಏನು ಹೇಳಿದ್ದಾರೆ, ಅದನ್ನೇ ನಮ್ಮ ಸರ್ಕಾರದವರು ಕಾರ್ಯರೂಪಕ್ಕೆ ತರುತ್ತಿದ್ದಾರೆ ಎಂಬುದನ್ನು ಈ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಇಲ್ಲಿ ಈ ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಿ ಮಿಡಲ್ ಸ್ಕೂಲ್ ವಿದ್ಯಾರ್ಥಿಗಳಿಗೆ ೫೦ ರೂಪಾಯಿ, ಹೈಸ್ಕೂಲ್ ವಿದ್ಯಾರ್ಥಿಗಳಿಗೆ ೭೫ ರೂಪಾಯಿ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ೫೦೦ ರೂಪಾಯಿಗಳು ಎಂದು ಇದೆ. ಆದರೆ ನಾನು ಹೇಳುತ್ತೇನೆ ಈಗ ಇಲ್ಲಿ ಏನು ಈ ವಿದ್ಯಾರ್ಥಿಗಳಿಗೋಸ್ಕರ ಕೊಡುತ್ತಿದ್ದಾರೆ ಇದನ್ನು ಇನ್ನೂ ಜಾಸ್ತಿ ಕೊಡಬೇಕು. ಏಕೆಂದರೆ ಹಳ್ಳಿಗಳಿಂದ ಬರತಕ್ಕ ವಿದ್ಯಾರ್ಥಿಗಳಿಗೆ.....

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಈ ವಿದ್ಯಾರ್ಥಿಗಳಿಗೆ ಹಣ ಕೊಡಬಹುದು ಬೇಡ ವೆಂದು ಹೇಳುತ್ತಿಲ್ಲ. ಆದರೆ ಈ ಸಭೆಯ ಅನುಮತಿಯನ್ನು ಪಡೆದು ನಂತರ ಖರ್ಚುಮಾಡಿ ಎಂದು ಹೇಳುತ್ತಿದ್ದೇನೆ ಅಷ್ಟೆ.

ಶ್ರೀ ಪಿ. ಎನ್. ರೆಡ್ಡಿ.—ನಮ್ಮ ವಿದ್ಯಾರ್ಥಿ ಯುವಕರು ಮುಂದೆ ಬರಬೇಕಾದರೆ ಈಗ ಸರ್ಕಾರದವರು ಕೊಡುತ್ತಿರುವ ಹಣ ಏನೇನೂ ಸಾಲದು ಇದನ್ನು ಇನ್ನೂ ಹೆಚ್ಚಿಗೆ ಕೊಡಬೇಕು.

ಇನ್ನು ಮನೆಗಳ ವಿಷಯ ಹೇಳುವುದಾದರೆ, ಚಿಕ್ಕ ಚಿಕ್ಕ ಗುಡಿಸಲುಗಳಿಗೆ ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಿರುವುದು ಬಹಳ ಸಂತೋಷದಾಯಕವಾಗಿದೆ. ಏಕೆಂದರೆ, ಹಳ್ಳಿಗಳ ಕಡೆ ಜನ ವಾಸಿಸಲು ಮನೆಗಳು, ವಿಚಾರಗಳು, ಗುಡಿಸಲುಗಳು ಯಾವುದೂ ಇಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ಅವರ ಕಷ್ಟವನ್ನು ನೋಡಿದರೆ ಎಂಥವರಿಗಾದರೂ ಕಣ್ಣೀರು ಬರುತ್ತದೆ. ಈ ಬೆಂಗಳೂರು ಡಿವಿಜನ್‌ಗೆ ಕೇವಲ ೧೦೦೦ ರೂಪಾಯಿಗಳನ್ನು ಏನು ಕೇಳುತ್ತಿದ್ದಾರೆ ಅದಕ್ಕಿಂತಲೂ ಹೆಚ್ಚಿಗೆ ಹಣವನ್ನು ಈ ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ಕೇಳಿದ್ದರೆ ನನಗೆ ಬಹಳ ಸಂತೋಷವಾಗುತ್ತಿತ್ತು.

ಇನ್ನು ನೀರಾವರಿ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಆಹಾರೋತ್ಪಾದನೆ ಜಾಸ್ತಿಯಾಗಬೇಕು. ಈ ನೀರಾವರಿಗೋಸ್ಕರ ಸರ್ಕಾರದವರು ಹೆಚ್ಚಿಗೆ ಹಣವನ್ನು ಕೊಟ್ಟಿರುವುದು ಸಮಂಜಸವಾಗಿದೆ. ನನ್ನ ಮಟ್ಟಿಗೆ ಹೇಳುವುದಾದರೆ ಈ ನೀರಾವರಿ ಬಾಬಿಗೋಸ್ಕರ ಇನ್ನೂ ಹೆಚ್ಚಿಗೆ ಹಣವನ್ನು ಖರ್ಚು ಮಾಡಿದರೂ ಬಹಳ ಸಂತೋಷ. ನಾನು ಕೋಲಾರ ಜಿಲ್ಲೆಯಿಂದ ಬಂದವನಾದ್ದರಿಂದ ಕೋಲಾರ ಜಿಲ್ಲೆ ಪರವಾಗಿ ಮಾತನಾಡುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಮೊದಲಿನಿಂದಲೂ ನೀರಿಗೆ ಅಭಾವ ಇದ್ದೇ ಇದೆ. ಅದರಲ್ಲೂ ಮಾರ್ಚ್, ಏಪ್ರಿಲ್ ತಿಂಗಳುಗಳಲ್ಲಂತೂ ನೀರಿನ ಅಭಾವ ಬಹಳವಾಗಿರುತ್ತದೆ. ನಮ್ಮ ಸರ್ಕಾರದವರು ನೀರಾವರಿ ಬಗ್ಗೆ ಅದರಲ್ಲೂ ಕುಡಿಯುವ ನೀರಿನ ಭಾವಿಗಳಿಗೊಸ್ಕರ ಇನ್ನೂ ಹೆಚ್ಚಿನ ಬಡ್ಜೆಟ್ ಕೇಳಿದ್ದರೆ ಖಂಡಿತವಾಗಿಯೂ ನಾವು ಅವಿರೋಧವಾಗಿ ನಮ್ಮ ಸಮ್ಮತಿಯನ್ನು ಕೊಡುತ್ತಿದ್ದೆವು.

ನಮ್ಮ ಸರ್ಕಾರದವರು ಈಗ ಸಾಮಾಜಿಕ ಪ್ರಗತಿಯನ್ನು ತರುತ್ತಿದ್ದಾರೆ. ರಾಜ್ಯಪಾಲರ ಭಾಷಣಕ್ಕೆ ಧನ್ಯವಾದಗಳನ್ನರ್ಪಿಸುವ ನಿರ್ಣಯದ ಮೇಲೆ ಮಾನ್ಯ ವಿರೋಧ ಪಕ್ಷದ ಸದಸ್ಯರು ಮಾತನಾಡುತ್ತಾ ಕೆಲವು ಟೀಕೆ ಟಿಪ್ಪಣಿಗಳನ್ನು ಮಾಡಿದರು. ಮತ್ತು ಚುನಾವಣೆ ಸಮಯದಲ್ಲಿ ಪ್ರಚಾರ ಮಾಡಿದಂತೆ ಸಮಾಜವಾದ ತತ್ವಗಳನ್ನು ಸ್ವಲ್ಪ ಸ್ವಲ್ಪ ಆಚರಣೆಗೆ ತರುತ್ತಿದ್ದಾರೆ ಎಂದು ಹೇಳಿದರು. ಜೊತೆಗೆ ೨೫ ಸಾವಿರ ರೂಪಾಯಿಗಳಲ್ಲಿ ಮನೆಯನ್ನು ಕಟ್ಟುವುದಕ್ಕಾಗುವುದಿಲ್ಲ ಎಂದು ಅವರು ಹೇಳಿದ್ದಾರೆ. ವಿರೋಧ ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಜೆ. ಎಚ್. ಪಾಟೀಲರು ತಮ್ಮ ಜನತಾ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಕಡಿಮೆ ಖರ್ಚಿನಲ್ಲಿ ಜನಗಳಿಗೆ ಮನೆಗಳನ್ನು ಕಟ್ಟಿಸಿಕೊಡುತ್ತೇವೆ ಎಂದು ಆಶ್ವಾಸನೆ ನೀಡಿದ್ದನ್ನು ಅವರು ಮರೆತಿದ್ದಾರೋ ಏನೋ ಗೊತ್ತಾಗುವುದಿಲ್ಲ. ಈ ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ಅದಷ್ಟು ಚಿಕ್ಕ ಚಿಕ್ಕ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಉತ್ತೇಜನ ಕೊಟ್ಟಂತೆ ಕಾಣುತ್ತದೆ. ಇದು ಅತ್ಯಂತ ಅವಶ್ಯಕವಾದುದು.

ಶ್ರೀಮತಿ ಎಸ್. ಪ್ರಮಿಳಾ. —ಪಾಯಿಂಟ್ ಆಫ್ ಆರ್ಡರ್ ಸ್ವಾಮಿ, ಮಾನ್ಯ ಸದಸ್ಯರು ಚುನಾವಣೆಯ ವಿಷಯ ಮಾತನಾಡುತ್ತಿದ್ದಾರೋ ಅಥವಾ ಸಪ್ಲಿಮೆಂಟರಿ ಬಡ್ಜೆಟ್ಟಿನ ಮೇಲೆ ಮಾತನಾಡುತ್ತಿದ್ದಾರೋ ಗೊತ್ತಾಗುತ್ತಿಲ್ಲ.

ಶ್ರೀ ಪಿ. ಎನ್. ರೆಡ್ಡಿ. —ಮಾನ್ಯ ಸದಸ್ಯರು ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಇವರಿಗೆ ಲೋ ಕಾಸ್ಟ್ ಬಿಲ್ಡಿಂಗ್‌ಗಳ ವಿಷಯ ಗೊತ್ತಿಲ್ಲ ಇವರು ಹಳ್ಳಿಗಳಲ್ಲಿ ಲೋ ಕಾಸ್ಟ್ ಬಿಲ್ಡಿಂಗ್‌ಗಳನ್ನು ನೋಡಿಲ್ಲ.

ಶ್ರೀಮತಿ ಎಸ್. ಪ್ರಮಿಳಾ. —ಮಾನ್ಯ ಸದಸ್ಯರಿಗಿಂತ ನಾನು ಹೆಚ್ಚು ಹಳ್ಳಿಗಳ ವಿಷಯವನ್ನು ತಿಳಿದುಕೊಂಡಿದ್ದೇನೆ. ನಾನು ಹಳ್ಳಿಯಲ್ಲೆ ಬೆಳೆದಿದ್ದೇನೆ. ಆದ್ದರಿಂದ ಮಾನ್ಯ ಸದಸ್ಯರು ಸಪ್ಲಿಮೆಂಟರಿ ಬಡ್ಜೆಟ್ಟಿನ ಮೇಲೆ ಮಾತ್ರ ಮಾತನಾಡುವುದು ಒಳ್ಳೆಯದು.

MR. CHAIRMAN.—Incidentally he has referred to it. The Hon. Member may kindly confine to the Supplementary Demands.

SRI BHASKAR NAIDU.—When new Member speaks, whether another new Member could interrupt.

SMT. PRAMILA —The Member should not speak outside the subject.

MR. CHAIRMAN.—For your information when a new Member makes his maiden speech, no Member should interrupt him so that he may not go out of the way. The Member may confine to the Supplementary Demands only and continue his speech.

ಶ್ರೀ ಪಿ. ಎನ್. ರೆಡ್ಡಿ. —ನಾನು ಮಾತನಾಡುವಾಗ ಏನನ್ನು ಮಿರಿ ಮಾತನಾಡುವುದಿಲ್ಲ. ಆದ್ದರಿಂದ ಸೌಜನ್ಯ ಶೀಲರು ಸುಸಂಸ್ಕೃತರೂ ಆದ ವಿರೋಧ ಪಕ್ಷದವರು ನಾವು ಮಾತನಾಡುವಾಗ ಈ ರೀತಿ ಮಧ್ಯೆ ಮಧ್ಯೆ ಮಾತನಾಡುವುದು ಸರಿಯಲ್ಲ.

ಮಾನ್ಯ ಹಣಕಾಸಿನ ಸಚಿವರು ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಅವುಗಳನ್ನು ಈ ಸಪ್ಲಿಮೆಂಟರಿ ಬಜೆಟ್ಟಿನಲ್ಲಿ ಇಟ್ಟಿದ್ದಾರೆ. ಆದ್ದರಿಂದ ಅದನ್ನು ನಾವುಗಳೆಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಇದರಲ್ಲಿ ಸರ್ಕಾರಕ್ಕೆ ನನ್ನದು ಒಂದು ವಿನ್ನಹ ಇದೆ. ಇದು ಏನೆಂದರೆ ನಮ್ಮ ತಾಲ್ಲೂಕಿನಲ್ಲಿ ಸಾಕಷ್ಟು ನೀರಾವರಿ ಸೌಕರ್ಯ ಇಲ್ಲ. ಮತ್ತು ಕೈಗಾರಿಕೆಗಳು ಇಲ್ಲ. ಆದ್ದರಿಂದ ನಮ್ಮ ತಾಲ್ಲೂಕಿಗೆ ಒಂದು ಚಿಕ್ಕ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಈ ಸಪ್ಲಿಮೆಂಟರಿ ಬಜೆಟ್ಟಿನಲ್ಲಿ ಅವಕಾಶ ಮಾಡಿಕೊಡಬೇಕು ಎಂದು ನಾನು ಹೇಳುತ್ತೇನೆ.

ನೀರಾವರಿ ವಿಷಯದಲ್ಲಿ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಜನಗಳಿಗೆ ಕುಡಿಯುವುದಕ್ಕೆ ನೀರಿಲ್ಲ. ಆದ ಕಾರಣ ಸರ್ಕಾರದವರು ಅಲ್ಲಿ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಜೊತೆಗೆ ಕೃಷಿಗೂ ಸಹ ನೀರನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು. ಈಗ ಕಾವೇರಿ ನದಿಯ ನೀರು ಬೆಂಗಳೂರು ನಗರಕ್ಕೆ ಬಂದಿದೆ. ಇದರ ಬಗ್ಗೆ ನಮ್ಮದು ಒಂದು ಹಕ್ಕು ಇದೆ. ಅದು ಏನೆಂದರೆ ಸರ್. ಎಂ. ವಿಶ್ವೇಶ್ವರಯ್ಯನವರು ನಮ್ಮ ಜಿಲ್ಲೆಯವರು. ಅವರು ಕನ್ನಂಬಾಡಿ ಕಟ್ಟೆಯನ್ನು ಕಟ್ಟಿದ ಪಿತಾಮಹರು. ಅವರ ಊರು ನಮ್ಮ ತಾಲ್ಲೂಕಿಗೆ ಕೇವಲ ೨೪ ಮೈಲಿ ಮಾತ್ರ ಇದೆ. ಆದ್ದರಿಂದ ನಾವೂ ಸಹ ಕಾವೇರಿ ನೀರನ್ನು ಕುಡಿಯುವುದಕ್ಕೆ ಹಾಗೂ ವ್ಯವಸಾಯಕ್ಕೆ ಪಡೆಯಲು ಹಕ್ಕನ್ನು ಹೊಂದಿದ್ದೇವೆ. ಈ ದೃಷ್ಟಿಯಿಂದ ಈ ಸಪ್ಲಿಮೆಂಟರಿ ಬಜೆಟ್ಟಿನಲ್ಲಿ ನಮ್ಮ ತಾಲ್ಲೂಕಿಗೆ ಕಾವೇರಿ ನದಿಯ ನೀರನ್ನು ಸರಬರಾಜು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸಿಕೊಂಡು ಈ ಸಪ್ಲಿಮೆಂಟರಿ ಬಜೆಟ್‌ನ್ನು ನಾನು ಅನುಮೋದಿಸಿ ನನ್ನ ವಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಸನ್ಮಾನ್ಯ ಸಭಾ ಪತಿಗಳೇ ಮಾನ್ಯ ಹಣಕಾಸಿನ ಮಂತ್ರಿಗಳು ರಾಜ್ಯಾಂಗದ ೨೧೫ನೇ ವಿಧಿಯ ಪ್ರಕಾರ ಸುಮಾರು ೨೦೮ ಕೋಟಿ ರೂಪಾಯಿಗಳ ವೆಚ್ಚದ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಬಹುಶಃ ೨೦೮ ಕೋಟಿ ರೂಪಾಯಿಗಳನ್ನು ಯಾವರೀತಿ ವಿಂಗಡಣೆ ಮಾಡುತ್ತಾರೆ ಎನ್ನುವುದನ್ನು ಇನ್ನೇ ಪ್ಯಾರಾದಲ್ಲಿ ಈ ರೀತಿ ಹೇಳಿದ್ದಾರೆ.

Of the total sum of Rs. 208.78 crores included in the Supplementary Estimates, a sum of Rs. 50.01 crores is covered by Central assistance, Rs. 1.52 crores by other receipts while a sum of Rs.131.27 crores is for accounting adjustments. The net outgo from the General Revenues is to the extent of Rs. 25.99 crores only.

ಎಂದು ಹೇಳಿದ್ದಾರೆ. ಸಾಮಿ ಇವೊತ್ತು ಕಳೆದ ವರ್ಷದ ಒಂದು ಎಕ್ಸ್‌ಪೆಂಡಿಚರ್ ಮತ್ತು ವಾರ್ಷಿಕ ಬಜೆಟ್ಟನ್ನು ನೋಡಿದರೆ ಕಳೆದ ವರ್ಷ ೫೭೦ ಕೋಟಿ ರೂಪಾಯಿಗಳ ಖರ್ಚನ್ನು ಅಂದಾಜು ಮಾಡಿತ್ತು. ಸಪ್ಲಿಮೆಂಟರಿ ಬಡ್ಜೆಟ್ಟು ಬರತಕ್ಕ ಉದ್ದೇಶ ಏನು ಎಂದು ಪ್ರಸ್ತಾಪ ಮಾಡುವುದಾದರೆ ಅನೇಕ ಸಂದರ್ಭಗಳಲ್ಲಿ ಇಂಡಿಯಾ ಸರ್ಕಾರದಿಂದ ಅನಿರೀಕ್ಷಿತವಾಗಿ ಹಣ ಬರಬಹುದು. ಅದು ಬಂದಾಗ ಹೊಸದಾಗಿ ಯೋಜನೆಗಳನ್ನು ಪ್ರಾರಂಭ ಮಾಡಬೇಕಾಗಿ ಬರುತ್ತದೆ. ಆಗ ಬಜೆಟ್ಟಿನಲ್ಲಿ ಅದನ್ನು ಸೇರಿಸಬೇಕಾದ ಪರಿಸ್ಥಿತಿ ಬರುತ್ತದೆ. ಅನಿರೀಕ್ಷಿತವಾಗಿ ಕೋರ್ಟು ಡಿಕ್ರಿ ಬರುತ್ತದೆ. ಅದನ್ನು ಅನಿರೀಕ್ಷಿತವಾಗಿ ವಿಂಗಡ್ ಮಾಡಬೇಕಾಗುತ್ತದೆ. ಆಗ ಇದು ಎಸೆನ್‌ಷಿಯಲ್ ಎಂದು ಹೇಳಬಹುದು. ಮತ್ತೆ ನ್ಯಾಚುರಲ್ ಕಲಾಮಿಟಿ ಬರುತ್ತದೆ. ಅಂಥಾ ಸಂದರ್ಭದಲ್ಲಿ ಹಣವನ್ನು ಕಂಟಿನ್‌ಜೆನ್ಸಿ ಫಂಡಿನಿಂದ ಖರ್ಚುಮಾಡಿ ಆದನ್ನು ರೀಕೂಪ್ ಮಾಡುವುದಕ್ಕೆ ಸಪ್ಲಿಮೆಂಟರಿ ಬಜೆಟ್ಟನ್ನು ತರಬಹುದು. ಈಗ ತಂದಿರತಕ್ಕ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಕೇಂದ್ರ ಸರ್ಕಾರದಿಂದ ಬರುವುದು ಕೇವಲ ೫೦ ಕೋಟಿ ರೂಪಾಯಿಗಳು ನ್ಯೂಸರ್ವಿಸ್‌ಗೆ ಖರ್ಚು ಮಾಡತಕ್ಕಂಥಾದ್ದು ಎಂದು ಇದರಲ್ಲಿ ಒಂದು ಸೂಚನೆಯನ್ನು ಮಾಡಿದ್ದಾರೆ. ಕಳೆದ ವರ್ಷ ೧೩೧.೨೭ ಕೋಟಿ ರೂಪಾಯಿಗಳನ್ನು ಯಾವ ಯಾವ ಕೆಲಸಗಳಿಗೆ ಖರ್ಚು ಮಾಡಬೇಕೆಂದು ಈ ಮನೆಯವರು ಮತ್ತು ಮೇಲ್ಮನೆಯವರು ಚರ್ಚೆಮಾಡಿ ಕೊಟ್ಟಿದ್ದಾರೆ ಅದನ್ನು ಖರ್ಚು ಮಾಡಿಲ್ಲ. ಈ ಹಣವನ್ನು ಇಲ್ಲಿ ವಾಪಸ್ಸು ತೆಗೆದುಕೊಂಡು ಇವರಿಗೆ ಬೇಕಾದಂತಹ ಯಾವುದೋ ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡು ಅದಕ್ಕೆ ಆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದಕ್ಕೆ ಈ ಮನೆಯ ಅಪ್ರೂವಲ್ ತೆಗೆದುಕೊಂಡಿದ್ದಾರೆಯೇ ? ಏತಕ್ಕೆಂದರೆ ೧೩೧ ಕೋಟಿ ರೂಪಾಯಿಗಳನ್ನು ಯಾವ ಯಾವ ಬಾಬುಗಳಿಗೆ ಖರ್ಚುಮಾಡಬೇಕು ಎಂದು ಹೇಳಿ ಈ ಮನೆಯವರು ಮತ್ತು

ಮೇಲ್ಮನೆಯವರು ಒಪ್ಪಿಗೆ ಕೊಟ್ಟು ಅಪ್ರೊಪ್ರಿಯೇಷನ್ ಬಿಲ್ ಕೂಡ ಪಾಸಾಗಿದೆ. ಹೀಗಿರುವಾಗ ಸರ್ಕಾರದವರು ಯಾವ ಯಾವ ಬಾಬುಗಳಿಗೆ ೧೩೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತೋ ಅದಕ್ಕೆ ಖರ್ಚು ಮಾಡದೆ ಬೇರೆ ಬೇರೆ ಯೋಜನೆಗಳಿಗೆ ಖರ್ಚು ಮಾಡಿದ್ದಾರೆ.

3-30 P.M.

(MR. SPEAKER IN THE CHAIR)

Readjust means that the expenditure is incurred over that item of work. That money is there. You wantto adjust that to some other work. The very object of discussing the budget is defeated. ಉದಾಹರಣೆಗೆ ಹೇಳುವುದಾದರೆ, ಡಿಮ್ಯಾಂಡ್ ನಂಬರ್ ೩೭-೩೮ ಕೋ ಆಪರೇಟಿವ್ ಡಿಪಾರ್ಟ್‌ಮೆಂಟನ್ನು ಡೀಲ್ ಮಾಡುತ್ತದೆ. ಇದರಲ್ಲಿ ಕೋಆಪರೇಟೀವ್ಸ್, ಕ್ರೆಡಿಟ್ ಕೋ ಆಪರೇಟೀವ್ಸ್ ಕನ್‌ಸ್ಟ್ರಕ್ಷಆಫ್‌ಗೋಡಾನ್ಸ್ ಮುಂತಾದ ಕೋಆಪರೇಟೀವ್ ಐಟಂಗಳನ್ನು ಕೊಟ್ಟಿದ್ದಾರೆ. ಇದನ್ನು ಆನ್ಯುಯಲ್ ರೆಗ್ಯುಲರ್ ಬಜೆಟ್‌ನಲ್ಲಿ ಇನ್‌ಕ್ಲೂಡ್ ಮಾಡಿದ್ದಾರೆ ಇದರ ಬಗ್ಗೆ ಮುಂದೆ ಚರ್ಚೆಗೆ ಅವಕಾಶ ಸಿಗುತ್ತಿತ್ತು. ಮುಂದೆ ಇದರ ಬಗ್ಗೆ ಚರ್ಚೆಗೆ ಬಂದಾಗ ಈ ಹಣದ ಅಗತ್ಯ ಏನಿದೆ, ಯಾವರೀತಿ ಖರ್ಚುಮಾಡಬೇಕು ಎನ್ನುವುದರ ಬಗ್ಗೆ ಸಲಹೆಗಳನ್ನು ಕೊಡುವುದಕ್ಕೆ ಮಾನ್ಯ ಸದಸ್ಯರಿಗೆ ಅವಕಾಶವಿರುತಿತ್ತು. ಸಂಬಂಧಪಟ್ಟ ಮಂತ್ರಿಗಳು ಈ ಸಭೆಯನ್ನು ಕನ್‌ವಿನ್ಸ್‌ಮಾಡಿ ಸ್ಯಾಂಕ್ಷನ್ ತೆಗೆದುಕೊಳ್ಳುತ್ತಿದ್ದರು. ತಾವು ಈ ಡಿಮ್ಯಾಂಡಲ್ಲಿ ಸುಮಾರು ೩,೫೬,೭೫,೦೦೦ ರೂಪಾಯಿಗಳನ್ನು ಖರ್ಚು ಮಾಡುವವರಿದ್ದೀರಿ. ಮಾನ್ಯ ಹಣಕಾಸಿನ ಸಚಿವರು ಇದಕ್ಕೆ ಸಮಜಾಯಿಷಿ ಕೊಡುವುದಕ್ಕೆ ಆಗುವುದಿಲ್ಲ. Demands were discuss.d debated & voted last year. ಈ ಹಣವನ್ನು ಯಾವುದೋ ಬಾಬಿಗೆ ಖರ್ಚು ಮಾಡಿದ್ದೀರಿ, ಅದಕ್ಕೆ ಅಪ್ರೂವಲ್ ಕೊಡಿ ಎಂದು ಹೇಳುತ್ತಿದ್ದೀರಿ. ಬಜೆಟ್ ಮಾಡತಕ್ಕ ಸಂದರ್ಭದಲ್ಲಿ ಸಂಬಂಧಪಟ್ಟ ಇಲಾಖೆಯವರು ಆ ವರ್ಷದಲ್ಲಿ ಎಷ್ಟು ಹಣ ಖರ್ಚಾಗುತ್ತದೆ, ಅದು ಅಭಿವೃದ್ಧಿ ಕಾರ್ಯಗಳಿಗೆ ಇರಬಹುದು, ಅಥವಾ ಹೊಸ ಕಾರ್ಯಗಳಿಗೆ ಇರಬಹುದು, ಆದರ ಎಕ್ಸ್‌ಪೆಂಡಿಚರ್, ರಸಿಟ್ಸ್ ಇಟ್ಟುಪಕ್ಷದಲ್ಲಿ ಅದು ಸದ್ವಿನಿಯೋಗವಾಗಿದೆಯೇ ಎಂದು ನೋಡಿ ಹೇಳಬಹುದು, ಆದರೆ ಇವತ್ತು ಆಗಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಚರ್ಚೆಯನ್ನು ಇನಿಷಿಯೇಟ್ ಮಾಡುತ್ತೀ. ಉದಾಹರಣೆಯಾಗಿ ಒಂದು ಡಿಮ್ಯಾಂಡ್ ಬಗ್ಗೆ ಹೇಳಿದರು. ಪೇಜ್ ನಂಬರ್ ೩೦,ಡಿಮ್ಯಾಂಡ್ ನಂಬರ್ ೩೦ರಲ್ಲಿ ತಿಳಿಸಿರುವ ಹಾಗೆ ಬ್ಯಾಕ್‌ವರ್ಡ್‌ಕ್ಲಾಸ್ ಕಮಿಷನ್ ಮಾಡಿದ್ದೀರಿ. ಹಾವನೂರ ಕಮಿಷನ್ ರಿಪೋರ್ಟ್ ತರಿಸಿಕೊಂಡು ಅದರ ಪ್ರಕಾರ ೨.೨೮,೫೦,೦೦೦ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೀರಿ, ಚುನಾವಣೆಗಳನ್ನು ಮುಂದೆ ಇಟ್ಟುಕೊಂಡು ಇಷ್ಟು ಹಣವನ್ನು ಖರ್ಚುಮಾಡಿದ್ದೀರಿ ಎಂದು ಹೇಳಿದರು ಹಾವನೂರ್ ಕಮಿಷನ್ ವರದಿ ಬಂದು ಎಷ್ಟೋ ವರ್ಷಗಳಾಯಿತು. ಹೋದವರ್ಷ ಆನ್ಯುಯಲ್ ಬಜೆಟ್‌ನಲ್ಲಿ ಸೋಷಿಯಲ್ ಸರ್ವೀಸ್ ಸ್ಕೀಂ ಎಂದು ಪುನು ಒಪ್ಪಿಕೊಂಡಿದ್ದೀರಿ ಅದನ್ನೂ ಹೀಗೆಯೇ ಕಾಂಟಿಪ್ಲೇಟ್ ಮಾಡಿಲ್ಲ. ಹಾವನೂರ್ ಕಮಿಷನ್ ವರದಿ ಬಗ್ಗೆ ಪಾದ ವಿವಾದ ನಡೆಯಿತು. ಮಾನ್ಯ ಮುಖ್ಯಮಂತ್ರಿಗಳು ಆಗಲೂ ಇದ್ದರು, ಈಗಲೂ ಇದ್ದಾರೆ. ಈ ವರದಿ ಆನ್‌ಸ್ಕ್ರುಟ್‌ಫಿಕ್ ಎಂದು ಹೇಳುತ್ತಾ ಇದ್ದರೂ, ಇದು ಆಧಾರರಹಿತ ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಅವರು ಕಷ್ಟಪಟ್ಟು ಕೆಲವು ಅಂಕಿಅಂಶಗಳನ್ನು ಕಲೆಹಾಕಿ ವರದಿಯನ್ನು ಕೊಟ್ಟಿದ್ದಾರೆ. ಇಷ್ಟೇ ಏಕೆ ಬಾಧ್ಯರಿಯಿಂದ ಮಾನ್ಯ ಸದಸ್ಯರುಗಳಿಗೆ ಕೂಡ ಆ ವರದಿ ಬಗ್ಗೆ ವಿಷಯಗಳನ್ನು ತಿಳಿಸುವುದಕ್ಕೆ ಅವಕಾಶ ಕೊಟ್ಟಿದ್ದರೆ ಸರ್ಕಾರಕ್ಕೆ ನಷ್ಟವಾಗುತ್ತಾ ಇರಲಿಲ್ಲ. ಈ ವರದಿಯನ್ನು ಈ ಮನೆಯಲ್ಲೂ ಇಟ್ಟಿಲ್ಲ, ಮೇಲ್ಮನೆಯಲ್ಲೂ ಇಟ್ಟಿಲ್ಲ, ಚರ್ಚೆ ಮಾಡುವುದಕ್ಕೆ ಅವಕಾಶಕೊಟ್ಟಿಲ್ಲ. ಆ ವರದಿಯ ಆಧಾರದ ಮೇಲೆ ಸರ್ಕಾರದವರು ಪುಸ್ತಕಗಳನ್ನು ಹೊರಡಿಸಿದ್ದಾರೆ. ಸೋಷಿಯಲ್ ಸರ್ವೀಸ್ ಸ್ಕೀಂ ಎಂದು ಮಾಡಿದ್ದೀರಿ. ಬ್ಯಾಕ್‌ವರ್ಡ್ ಕ್ಲಾಸ್ ಕಾರ್ಪೊರೇಷನ್‌ನ್ನೂ ಕೂಡ ರಚನೆ ಮಾಡಿದ್ದೇವೆಂದು ತಾವು ಇದರಲ್ಲಿ ತಿಳಿಸಿದ್ದೀರಿ. ಈ ಬ್ಯಾಕ್‌ವರ್ಡ್‌ಕ್ಲಾಸ್ ಕಮಿಷನ್ ವರದಿ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶಕೊಟ್ಟಿದ್ದರೆ ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನಲ್ಲಿ ಈ ಡಿಮ್ಯಾಂಡನ್ನು ಈ ಮನೆಯಲ್ಲಿ ತರಬೇಕಾದಂಥ ಅಗತ್ಯ ಇರಲಿಲ್ಲ. ನಿಮಗೆ ವರದಿ ಬೇಕಾಗಿತ್ತು ತರಿಸಿಕೊಂಡಿರಿ. ಆಮೇಲೆ ಅದರ ಬಗ್ಗೆ ಆಕ್ಷನ್ ತೆಗೆದುಕೊಳ್ಳಲಿಲ್ಲ, ಒಂದು ಬಜೆಟ್ ಅಪ್ರೂವ್ ಆಯಿತು. ಅದಾದಮೇಲೆ ಚುನಾವಣೆಗಳು ಬಂದಾಗ ಕೆಲವು ಕೆಲಸಗಳನ್ನು ಮಾಡಬೇಕು ಎಂದು ಪಳ್ಳಿಗಳಲ್ಲಿ ಬಡವರಿಗೆ ಅನುಕಂಪ ತೋರಿಸಬೇಕು

ಎಂದು ಸೋಷಿಯಲ್ ಸರ್ವೀಸ್ ಮಾಡಿದ್ದೀರಿ. ಏಕೆಂದರೆ ಇದರ ಬಗ್ಗೆ ಚುನಾವಣೆಯಲ್ಲಿ ಹೇಳಬೇಕಾಗುತ್ತದೆ. ಒಂದುವೇಳೆ ಚುನಾವಣಾ ದೃಷ್ಟಿಯಿಂದ ಇದನ್ನು ಮಾಡಿದ್ದ ಪಕ್ಷದಲ್ಲಿ ಸರಿಯಾದುದಲ್ಲ. ಸೋಷಿಯಲ್ ಸರ್ವೀಸನ್ನು ೨೦ ವರ್ಷಗಳಿಂದ ಸರ್ಕಾರ ಮಾಡಿರಲಿಲ್ಲ, ಅದನ್ನು ತಾವು ಮಾಡಿದ್ದೀರಿ, ನಾನು ಒಪ್ಪುತ್ತೇನೆ. ಇದು ಪರ್ಮನೆಂಟ್ ಮೆಷರ್ ಬಹಳ ಕಾಲ ನಡೆದುಕೊಂಡು ಹೋಗತಕ್ಕಂಥಾದ್ದು. ಬ್ಯಾಕ್‌ವರ್ಡ್ ಕ್ಲಾಸ್‌ಗೆ, ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಅನೇಕ ರಕ್ಷಣೆಗಳನ್ನು ಕೊಡಬೇಕಾಗುತ್ತದೆ, ಇನ್‌ಸೆಂಟಿವ್ಸ್, ಪ್ರೊಟೆಕ್ಷನ್ ಕೊಡಬೇಕಾಗುತ್ತದೆ. ಇದನ್ನು ಮಾಡತಕ್ಕ ಸಂದರ್ಭದಲ್ಲಿ ತಾವು ಅನುಸರಿಸತಕ್ಕ ನೀತಿ ಸರಿಯಾದುದೇ ಎಂದು ನೋಡುವಾಗ, ಹಾವನೂರ್ ಕಮಿಷನ್ ವರದಿ ಬಗ್ಗೆ ಈ ಮಾನ್ಯ ಸಭೆಯ ಸದಸ್ಯರುಗಳಿಗೆ ಅವರ ಅಭಿಪ್ರಾಯಗಳನ್ನು ವ್ಯಕ್ತಮಾಡುವುದಕ್ಕೆ ಅವಕಾಶವನ್ನು ಕೊಡಬೇಕಾಗಿತ್ತು. ಬ್ಯಾಕ ವರ್ಡ್ ಕ್ಲಾಸ್‌ಗೆ ಪ್ರೊಟೆಕ್ಷನ್ ಕೊಡಬೇಕು ಎಂದು ಸ್ಕಾಲರ್‌ಶಿಪ್ ಕೊಟ್ಟಿದ್ದೀರಿ. ಮಿಡ್ಲ್‌ಸ್ಕೂಲ್, ಹೈಸ್ಕೂಲ್ ಮತ್ತು ಕಾಲೇಜು ಶಿಕ್ಷಣ ಪಡೆಯತಕ್ಕವರಿಗೆ ೫೦, ೭೫ ಮತ್ತು ೫೦೦ ರೂಪಾಯಿಗಳ ಸ್ಕಾಲರ್‌ಶಿಪ್ ಕೊಡಬೇಕು ಎಂದು ಯಾವ ಸೈಂಟಿಫಿಕ್ ಬೇಸಿಸ್ ಮೇಲೆ ಮಾಡಿದ್ದೀರೋ ಗೊತ್ತಿಲ್ಲ. ರೂರಲ್ ಏರಿಯಾದಲ್ಲಿ ಕೇಳತಕ್ಕ ಜನಕ್ಕೆ ಹಣವನ್ನು ಒದಗಿಸಿದರೆ ಯಾರೂ ಬೇಡ ಎಂದು ಹೇಳುವುದಿಲ್ಲ.

Welcome to the Parliamentary Delegation from Republic of Korea

MR. SPEAKER.—I wish to inform the House that a Parliamentary delegation from the Republic of Korea led by His Excellency Mr. IL Kwon Chung, Speaker of the National Assembly of the Republic of Korea arrived in Bangalore yesterday evening. The members of the delegation are now in the Speaker's Gallery of this chamber witnessing the proceedings of this House.

On my behalf and on behalf of the Hon'ble Members of this House, I have great pleasure in welcoming the delegation.

During the short period of their stay we are trying to show them as much as possible of our city. We wish them a happy stay and through them we convey our greetings & best wishes to their National Assembly and the people of Korea. The delegation is returning to Delhi this evening.

SRI D. DEVARAJ URS.—Permit me, Sir, to join my voice with your while extending your hearty welcome to this delegation and particularly His Excellency Mr. IL Kwon Chung, Speaker of the National Assembly of the Republic of Korea and the delegation of Members of Parliament & delegation of journalists from South Korea We are indeed honoured by their visit to our State and particularly to the City of Bangalore as well as to this August House. Sir, in recent years, the friendly relationship between India and the two Koreas is fast improving and particularly with South Korea, our trade relations, cultural relations and relations in so many other aspects have improved very much and we are coming closer and closer. It was heartening to note from His Excellency Mr. IL Kwong Chung, that the Speker of the Lok Sabha, who happens to be the member from Bangalore Constituency for the Lok Sabha had visited Korea and it appears he has spoken so highly of the City of Bangalore & its beautiful surroundings its bazaars and so on and so forth.